
# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ಫೆಬ್ರವರಿ 2019 ಮಾಸ ಪತ್ರಿಕೆ

ಸಂಪುಟ/Volume : 41
ಸಂಚಿಕೆ/Issue : 5
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | February 2019 | Monthly




A Journal of Karnataka State Secondary Teachers' Association

# ಸಂಪಾದಕೀಯ

## ಮತ"ದಾನ"

"ಮತದಾನವು ಜನತೆಯು ಯಾವುದಾದರೂ ವಿಷಯ ಅಥವಾ ಅಭ್ಯರ್ಥಿಗಳ ಬಗ್ಗೆ ತಮ್ಮ ನಿರ್ಣಯಗಳನ್ನು ಸೂಚಿಸಲು ಅನುವು ಮಾಡಿಕೊಡುವ ಒಂದು ಪ್ರಕ್ರಿಯೆ. ಜನತಂತ್ರಗಳ ಚುನಾವಣೆಗಳಲ್ಲಿ ಮತದಾನ ಪ್ರಮುಖ ಅಂಗ."

'ಚುನಾವಣೆ' ಎಂಬ ಶಬ್ದಕ್ಕೆ ಅರ್ಥ ಕೆಲವೊಬ್ಬರಿಗೆ ಸೇವೆಯ ಹೆಬ್ಬಾಗಿಲು, ದೇಶಕ್ಕೋಸ್ಕರ ತಮ್ಮ ಸಮರ್ಪಣೆ, ದೇಶದ ಬಗೆಗಿರುವ ಮಹಾನ್ ಕಲ್ಪನೆಗಳನ್ನು ಸಾಕಾರಗೊಳಿಸಲು ಇರುವ ಅವಕಾಶ, ದೇಶವನ್ನು ವಿಶ್ವದಲ್ಲಿಯೇ ವಿಜೃಂಭಿಸಲು ಪ್ರವೇಶ ದ್ವಾರ. ಇನ್ನೂ ಹಲವರಿಗೆ ಪುಕ್ಕಟೆ ಅಧಿಕಾರದ ಗದ್ದುಗೆ, ಸಂಪಾದನೆಯ ಸುಗಮ ಹಾದಿ, ವೈಯಕ್ತಿಕ ಪ್ರತಿಷ್ಠೆಯ ಕಣ. ಈ ಎಲ್ಲಾ ಭಾವನೆಗಳು ಚುನಾವಣೆಗೆ ನಿಲ್ಲುವವರದಾದರೆ ಅವರನ್ನು ಆಯ್ಕೆ ಮಾಡುವವರ ಭಾವನೆ ಈ ರೀತಿಯಾಗಿದೆ: ದೇಶದ ಬಗ್ಗೆ ಕಂಡಿರುವ ಕನಸನ್ನು ಸಾಕಾರ ಮಾಡುವವರ ಆಯ್ಕೆ, ಮುಂದುವರಿದ ದೇಶವನ್ನಾಗಿ ಮಾಡುವವರ ಆಯ್ಕೆ, ನಮ್ಮ ಸೇವೆಯನ್ನು ನಿಷ್ಠೆಯಿಂದ ಮಾಡುವವರ ಆಯ್ಕೆ. ಮತ್ತೆ ಕೆಲವೊಬ್ಬರಿಗೆ ಹಣವನ್ನು ಗಳಿಸಲು ಇರುವ ಸುಗಮ ಹಾದಿ, ಚುನಾಯಿಸಬೇಕಾದವರ ಹಿನ್ನೆಲೆ, ಸೇವಾಮನೋಭಾವ ಮತ್ತಾವುದನ್ನು ಗಮನಿಸದೆ, ಚಿಲ್ಲರೆ ಕಾಸು ಹಾಗೂ ಮದ್ಯದ ಅಮಲಿಗೆ ಮತದ ಮಾರಾಟದ ಸಮಯ. ದೂರಾಲೋಚನೆಯೇ ಇಲ್ಲದೇ ದುರಾಲೋಚನೆಯಿಂದ ಯಾರನ್ನೋ ಆಯ್ಕೆ ಮಾಡಿದರಾಯಿತು, ಯಾರು ಗೆದ್ದರೂ ನಮ್ಮ ವೈಯಕ್ತಿಕ ಜೀವನದಲ್ಲಿ ಆಗುವ ಬದಲಾವಣೆಯೇನೂ ಇಲ್ಲ. ಹೀಗಿರುವಾಗ ಯಾರಿಗೋ ಒಬ್ಬರಿಗೆ ಆಯ್ಕೆ ಮಾಡಿದರಾಯಿತು ಎನ್ನುವ ನಿಕೃಷ್ಟ ಭಾವನೆ.

ಇಲ್ಲಿ ನಾನೊಂದು ಉದಾಹರಣೆ ಕೊಡಲು ಬಯಸುತ್ತೇನೆ. ನಾವು ಪ್ರತಿದಿನ ನಮ್ಮ ಶರೀರದ ಸ್ವಾಸ್ಥ್ಯಕ್ಕಾಗಿ ಆಹಾರ ಸ್ವೀಕರಿಸುತ್ತೇವೆಯಲ್ಲವೇ? ಕೆಲವೊಬ್ಬರು ಆಹಾರ ತಿನ್ನಲಿಕ್ಕಾಗಿಯೇ ಬದುಕಿದ್ದಾರೆ, ಇನ್ನು ಕೆಲವರು ಬದುಕಲಿಕ್ಕಾಗಿ ಆಹಾರ ಸ್ವೀಕರಿಸುತ್ತಾರೆ. ಆಹಾರ ಸ್ವೀಕಾರ ಮಾಡುವಾಗ ನಮಗೆ ನಮ್ಮ ದೇಹದ ಮೇಲೆ ಆ ಆಹಾರದ ಪರಿಣಾಮ ಏನಾಗುತ್ತದೆ ಎಂಬುದರ ಅರಿವಿದ್ದರೆ ಆಹಾರ ಸ್ವೀಕಾರಕ್ಕೆ ಒಂದು ಅರ್ಥ ಬರುತ್ತದೆ. ಕೇವಲ ಹೊಟ್ಟೆ ತುಂಬಿಸಲಿಕ್ಕಾಗಿ ಮತ್ತು ಬಾಯಿ ಚಪಲಕ್ಕಾಗಿ ಏನಾದರೊಂದು ಆಹಾರ ಸೇವನೆ ಮಾಡಿದರೆ ಇದರ ಕೆಟ್ಟ ಪರಿಣಾಮವನ್ನು ನಮ್ಮ ದೇಹ ಒಂದಿಲ್ಲೊಂದು ದಿನ ಅನುಭವಿಸಲೇ ಬೇಕಾಗುತ್ತದೆ.

ಹಾಗೆಯೇ ಚುನಾವಣೆಯಲ್ಲಿ ಮತದಾನವೆಂಬುದು ಆಹಾರವಿದ್ದಂತೆ. ಮುಂದಿನ ಆಗು-ಹೋಗುಗಳ ಬಗ್ಗೆ ಆಲೋಚಿಸಿ ಮತದಾನ ಮಾಡಿದರೆ ಒಳ್ಳೆಯ ಪರಿಣಾಮ ಪಡೆಯಬಹುದು. ಇಲ್ಲದಿದ್ದರೆ ದೇಶವೆಂಬ ದೇಹಕ್ಕೆ ಆಗುವ ಅನಾಹುತಗಳಿಗೆ ನಾವೇ ಕಾರಣಕರ್ತರಾಗಬಹುದು.


ಭಾರತೀಯರಲ್ಲಿ ಕೆಲವೊಬ್ಬರು ಅವಿದ್ಯಾವಂತರಿರಬಹುದು, ಆದರೆ ಯಾರೂ ಬುದ್ಧಿಹೀನರಲ್ಲ. ಆದ್ದರಿಂದ ನಮ್ಮ ದೇಶದ ಭವಿಷ್ಯವನ್ನು ರೂಪಿಸಬಲ್ಲ, ಸುಭದ್ರಗೊಳಿಸಬಲ್ಲ, ಭಾರತಮಾತೆಯನ್ನು ವಿಶ್ವಮಾತೆ ಮಾಡಬಲ್ಲವರನ್ನೇ ಆಯ್ಕೆ ಮಾಡಬೇಕಾದುದು ನಮ್ಮ-ನಿಮ್ಮೆಲ್ಲರ ಆದ್ಯ ಕರ್ತವ್ಯವಲ್ಲವೇ?

ಯಾವುದೇ ಆಸೆ-ಆಮಿಷಗಳಿಗೆ ಒಳಗಾಗದೇ ಮತ (ಲೇಖನದ ಮೊದಲೇ ನೀಡಿರುವ ಮತದಾನದ ವ್ಯಾಖ್ಯೆಯನ್ನು ಗಮನಿಸಿ) "ದಾನ" ಮಾಡಿದರೇ ನಮ್ಮ ದೇಶಕ್ಕೆ ಒಳಿತಲ್ಲವೇ? ದೇಶಕ್ಕೆ ಒಳಿತಾದರೆ ನಮ್ಮ-ನಿಮ್ಮೆಲ್ಲರ ದೇಹಕ್ಕೆ ಒಳಿತಲ್ಲವೇ?

ದಾನಗಳಲ್ಲಿ ಪ್ರಮುಖ ದಾನಗಳೆಂದರೆ ವಿದ್ಯಾದಾನ, ಅನ್ನದಾನ, ನೇತ್ರದಾನ, ದೇಹದಾನ, ಮತದಾನ. ಈ ಎಲ್ಲಾ ದಾನಗಳಲ್ಲಿ ಮತದಾನವೊಂದನ್ನು ಬಿಟ್ಟರೆ ಉಳಿದವುಗಳನ್ನೆಲ್ಲಾ ಬೇರೆಯವರ ಒಳಿತಿಗಾಗಿ ವ್ಯಕ್ತಿ ಮಾಡುವ ದಾನ. ಮತದಾನ ಮಾತ್ರ ಪ್ರಜೆಗಳೇ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಮಾಡುವ ದಾನ. ಅಂತಹ ಮತದಾನಕ್ಕೆ ಮಹತ್ವ ನೀಡಿ ಮಹತ್ವದ್ದೇನಾದರೂ ಸಾಧಿಸೋಣವೇ?

ಸಂಪಾದಕ

# ಸೂಕ್ತಿ



ಲೋಕಯಾತ್ರಾಭಯಂ
ಲಜ್ಜಾದಾಕ್ಷಿಣ್ಯಂ ತ್ಯಾಗಶೀಲತಾ ।
ಪಂಚಯತ್ರನವಿಂದ್ಯತೇ
ನ ಕುರ್ಯಾತ್ ತತ್ರ ಸಂಗತಿಮ್ ॥

ವ್ಯವಹಾರ ಜ್ಞಾನ, ಭಯ, ನಾಚಿಕೆ, ದಾಕ್ಷಿಣ್ಯದ ಸ್ವಭಾವ ಹಾಗೂ ತ್ಯಾಗಬುದ್ಧಿ _ ಈ ಐದು ಗುಣಗಳು ಯಾರಲ್ಲಿ ಇರುವುದಿಲ್ಲವೋ ಅಂತಹವರ ಸ್ನೇಹವನ್ನು ಮಾಡಬಾರದು. ಆಯಾ ಸಂದರ್ಭ, ಪರಿಸ್ಥಿತಿಗಳಿಗೆ ಅಗತ್ಯವಾಗಿ ಬೇಕಾದ ಈ ಐದು ಗುಣಗಳನ್ನು ಪ್ರತಿಯೊಬ್ಬರೂ ಹೊಂದಿರಬೇಕು, ಮತ್ತು ಅಂಥ ಗುಣಗಳಿರುವವರ ಗೆಳೆತನವನ್ನೇ ಮಾಡಬೇಕು. ಇದರಿಂದ ಒಳ್ಳೆಯದೇ ಆಗುತ್ತದೆ.

- ಚಾಣಕ್ಯನೀತಿ

# ಪರಿವಿಡಿ


- ಪ್ರಜಾಪ್ರಭುತ್ವಕ್ಕೆ ಭಾರತವೇ ತಾಯಿ ! 3
- ಬಂತು ಚುನಾವಣೆ ನಮ್ಮ ಓಟು ಯಾರಿಗೆ ? 4
- ಅ.ಭಾ.ರಾ.ಶೈ.ಮಹಾಸಂಘದ ಕಾರ್ಯಕಾರಿಣಿ ಸಭೆ 5
- ಸಂಕಲ್ಪ ದಿನಾಚರಣೆ, ಡೈರಿ ಬಿಡುಗಡೆ ಕಾರ್ಯಕ್ರಮ 5
- ಮತದಾನದಲ್ಲಿ ಮಹಿಳೆಯ ಪಾತ್ರ 6
- 'ರಾಜ್ಯ ಮಟ್ಟದ ಹಿಂದಿ ಶಿಕ್ಷಕರ ಕಾರ್ಯಾಗಾರ 7
- ಸಶಸ್ತ್ರಕ್ರಾಂತಿಯ ಪೀಠಿಕೆ – ಬರೆದಿತ್ತವನು ಫಡಕೆ 8
- ಕರ್ತವ್ಯಬೋಧ ದಿವಸ್ ಆಚರಣೆ 10
- ಚಿತ್ರಸುದ್ದಿ 11

# ಪ್ರಜಾಪ್ರಭುತ್ವಕ್ಕೆ ಭಾರತವೇ ತಾಯಿ!



■ **ಶ್ರೀ ಬಾಲಕೃಷ್ಣ ಭಟ್**
**ದಕ್ಷಿಣ ಕ್ಷೇತ್ರೀಯ ಪ್ರಮುಖ್, ಎ.ಬಿ.ಆರ್.ಎಸ್.ಎಂ.**

ಪ್ರಜಾಪ್ರಭುತ್ವ ಪದ್ಧತಿಯನ್ನು ಮಿಕ್ಕೆಲ್ಲ ಆಡಳಿತ ವಿಧಾನಗಳಿಗಿಂತ ಕಡಿಮೆ ತೊಂದರೆಯುಳ್ಳ ಪದ್ಧತಿಯೆಂದು ತಿಳಿಯಲಾಗುತ್ತಿದೆ. ಇದರರ್ಥ ಆಡಳಿತದ ಎಲ್ಲಾ ಪ್ರಕಾರಗಳು ಒಂದಲ್ಲ ಒಂದುತರದ ನ್ಯೂನತೆಯಿಂದ ಬಳಲುತ್ತಿವೆ ಎಂಬುದು. ಯಾವುದೇ ಆಡಳಿತ ಪದ್ಧತಿಯು ನೂರಕ್ಕೆ ನೂರು ದೋಷರಹಿತ ಎನ್ನುವಂತಿಲ್ಲ ಎಂಬುದು ಇದರರ್ಥ. ರಾಜನ ಆಳ್ವಿಕೆ, ಒಂದು ನಿರ್ದಿಷ್ಟ ಪಕ್ಷದ್ದೇ ಆಳ್ವಿಕೆ (ಉದಾ: ಚೀನಾದಲ್ಲಿರುವಂತೆ ಕಮ್ಯುನಿಸ್ಟ್ ಪಕ್ಷ) ವಿವಿಧ ಪಕ್ಷಗಳು ಅಥವಾ ಜನಸಮೂಹಗಳ ಪ್ರತಿನಿಧಿಗಳು ಒಟ್ಟು ಸೇರಿ ರಾಜ್ಯಭಾರ ನಡೆಸುವುದು, ಏಕಾಧಿಪತ್ಯ ಅಥವಾ ನಿರಂಕುಶ ಪ್ರಭುತ್ವ– ಹೀಗೆ ಹತ್ತಾರು ತರಹದ ಆಡಳಿತ ವಿಧಾನಗಳನ್ನು ವಿಶ್ವದಾದ್ಯಂತ ಕಳೆದ ನೂರಾರು ವರ್ಷಗಳಲ್ಲಿ ನಾವು ಕಂಡಿದ್ದೇವೆ. ಈ ಎಲ್ಲಾ ವಿಧಾನಗಳ ಒಳಿತು ಕೆಡುಕುಗಳ ವಿಶ್ಲೇಷಣೆಯಿಂದ ಗಮನಿಸಬಹುದಾದ ಅಂಶವೆಂದರೆ ಅತ್ಯಂತ ಕಡಿಮೆ ತೊಂದರೆ ಉಳ್ಳ ವಿಧಾನವೇ ಪ್ರಜಾಪ್ರಭುತ್ವವೆಂಬುದು.

ಪ್ರಜಾಪ್ರಭುತ್ವಕ್ಕೆ ಅಮೇರಿಕಾದ ಅಧ್ಯಕ್ಷ ಅಬ್ರಹಾಂ ಲಿಂಕನ್ ನೀಡಿದ್ದೆನ್ನಲಾದ ನಿರ್ವಚನವನ್ನೇ ಎಲ್ಲರೂ ಉಲ್ಲೇಖಿಸುವುದನ್ನು ಕಾಣುತ್ತೇವೆ.

"ಜನರಿಂದ, ಜನರಿಗಾಗಿ, ಜನರೇ ನಿರ್ವಹಿಸುವ ಆಡಳಿತ ಪದ್ಧತಿಯನ್ನು 'ಪ್ರಜಾಪ್ರಭುತ್ವ' "ವೆಂದು ಲಿಂಕನ್ ಕರೆದಿದ್ದ. ಮೇಲಿಂದ ಮೇಲೆ ಸದರಿ ವಿವರಣೆಯನ್ನು ಒಪ್ಪಬಹುದೆಂದಿಟ್ಟುಕೊಂಡರೂ ನಿಜ ಅರ್ಥದಲ್ಲಿ ಬಹುಜನರ ಭಾವನೆಗಳಿಗೆ ಪ್ರಜಾಪ್ರಭುತ್ವದಲ್ಲಿ ಮನ್ನಣೆ ಸಿಗದಿರುವುದನ್ನೂ ಕಾಣುತ್ತೇವೆ.

ಇಂದಿನದ್ದೇ ಉದಾಹರಣೆ ನೀಡುವುದಾದರೆ ರಾಮಜನ್ಮ ಭೂಮಿಯಲ್ಲೇ ರಾಮಮಂದಿರ ನಿರ್ಮಿಸುವ ನಮ್ಮ ದೇಶದ ಬಹುಸಂಖ್ಯಾತರ ಭಾವನೆಗಳಿಗೆ ಅದಿನ್ನೂ ಮನ್ನಣೆ ಬಂದಿಲ್ಲದಿರುವುದು ಪ್ರಜಾಪ್ರಭುತ್ವದ ಅಣಕವೆನ್ನಬೇಕಷ್ಟೆ.

ಪ್ರಜಾಪ್ರಭುತ್ವದ ವ್ಯವಸ್ಥೆಯೇ ಆಡಳಿತ ನಡೆಸುತ್ತಿರುವ ನಮ್ಮ ದೇಶದಲ್ಲಿಯೂ 1975–76 ರಲ್ಲಿ ಶ್ರೀಮತಿ ಇಂದಿರಾಗಾಂಧಿ ಪ್ರಧಾನಮಂತ್ರಿಯಾಗಿದ್ದಾಗ ವಿಶ್ವದ ಯಾವುದೇ ನಿರಂಕುಶ ಆಡಳಿತಕ್ಕಿಂತಲೂ ಕೆಟ್ಟದಾಗಿ ಜನತೆಯ ಮೂಲಭೂತ ಹಕ್ಕುಗಳನ್ನು ಕಸಿದು, ಜೈಲಿಗೆ ದೂಡಿದ ಉದಾಹರಣೆಯನ್ನು ಇತಿಹಾಸ ದಾಖಲಿಸಿದೆ.

ತಥಾಕಥಿತ ನಿರಂಕುಷ ಆಡಳಿತದ ಮುಂದಾಳು/ ರಾಜ "ಬಹುಜನ ಸುಖಾಯ, ಬಹುಜನಹಿತಾಯ" ಎಂಬ ಪರಮೋದ್ದೇಶ ಇಟ್ಟುಕೊಂಡು ಜನರಿಗೆ ಆಡಳಿತ ನೀಡಿದ್ದಕ್ಕೆ ಅನೇಕ ದೇಶಗಳಲ್ಲಿ, ವಿಶೇಷವಾಗಿ ಭಾರತ ದೇಶದಲ್ಲೂ ತುಂಬಾ ಉದಾಹರಣೆಗಳು ಸಿಗುತ್ತವೆ.

ರಾಮಾಯಣಕಾಲದ ಶ್ರೀ ರಾಮಚಂದ್ರನ ರಾಜ್ಯಭಾರದ ಕ್ರಮದಿಂದ "ರಾಮರಾಜ್ಯ" ಕಲ್ಪನೆಯೇ ಸೃಷ್ಟಿಯಾದುದನ್ನು ನಾವು ಕಾಣುತ್ತೇವೆ. ಬಹು ಜನರ ಭಾವನೆಗಳನ್ನು ಗೌರವಿಸುವುದಕ್ಕಿಂತ ಹೆಚ್ಚಾಗಿ ಎಲ್ಲೋ ಒಬ್ಬ ಅಗಸ ಸಿಟ್ಟಿನಿಂದ ತನ್ನ ಹೆಂಡತಿಯ ಬಳಿ ರಾಮನ ಬಗ್ಗೆ ಏನೋ ಹೇಳಿದನೆಂಬ ಕಾರಣಕ್ಕೆ ಸ್ವತಃ ಶ್ರೀ ರಾಮನೇ ಗೂಢಚಾರರ ಮೂಲಕ ತಿಳಿದ ಸಂಗತಿಯ ಕಾರಣಕ್ಕೆ ಪತ್ನಿ ಸೀತೆಯನ್ನೇ ಪರಿತ್ಯಜಿಸಿದ ವಿಷಯವನ್ನು ಆದರ್ಶದ ಪರಾಕಾಷ್ಠೆ ಎನ್ನೋಣವೇ? ಪ್ರಜಾಪ್ರಭುತ್ವದ ಮೂಲ ಸ್ವರೂಪವೆನ್ನೋಣವೇ? ಚರ್ಚಿಸಬಹುದಾದ ವಿಷಯವಿದು.

ಯಾವುದೇ ಆಡಳಿತ ವ್ಯವಸ್ಥೆಯು ಬಹುಜನ ಸುಖಾಯ ಬಹುಜನ ಹಿತಾಯ ಆಗುವುದಲ್ಲದೆ ಸರ್ವಜನ ಸುಖಾಯ, ಸರ್ವಜನ ಹಿತಾಯ ಆಗಬೇಕಾದುದೇ ನಮಗೆ ಆದರ್ಶವಾಗಬೇಕು. ಎಲ್ಲರಿಗೂ ಒಳ್ಳೆಯದಾಗಲಿ, ಸುಖವಾಗಲಿ ಎಂದು ಬಯಸುವುದೇ "ಸರ್ವೇ ಜನಾಃ ಸುಖಿನೋ ಭವಂತು" ಎಂಬ ಭಾರತೀಯ ವಿಚಾರದ ಮೂಲ ಮಂತ್ರ. ಈ ಉದ್ದೇಶವನ್ನು ಈಡೇರಿಸುವ ಆಡಳಿತ ವ್ಯವಸ್ಥೆ ಪ್ರಜಾಪ್ರಭುತ್ವದಲ್ಲಿದೆ ಎನ್ನಬಹುದಷ್ಟೇ.

ಸಾಮ್ರಾಟ್ ಅಶೋಕನ ರಾಜ್ಯಭಾರ, ವಿಜಯನಗರದ ಅರಸರ ಸ್ವರ್ಣಮಯ ಇತಿಹಾಸ, ಹಾಗೆಯೇ ಇನ್ನೂ ಅನೇಕ ಉದಾಹರಣೆಗಳು ನಮ್ಮ ದೇಶದ ಅರಸರು ಪ್ರಜಾಪ್ರಭುತ್ವಕ್ಕೂ ಮೀರಿದ ಏಕಾಧಿಪತ್ಯವೆನ್ನಲಡ್ಡಿಯಿಲ್ಲ.


ಇಂದಿನ ಭಾರತೀಯ ಪ್ರಜಾಪ್ರಭುತ್ವ ಬ್ರಿಟನ್‌ನ ಪ್ರಜಾಪ್ರಭುತ್ವವನ್ನು ಆದರ್ಶವಾಗಿ ಮಾದರಿಯಾಗಿ ಬಳಸಿಕೊಂಡಿದೆ ಎನ್ನಲಾಗುತ್ತಿದೆ. ಆದರೆ ಬ್ರಿಟನ್ ಮತ್ತು ಅಮೇರಿಕಾದಲ್ಲಿನ ಪ್ರಜಾಪ್ರಭುತ್ವವನ್ನು ಅಧ್ಯಕ್ಷೀಯ ಮಾದರಿ ಎಂದೂ ಭಾರತೀಯ ಪ್ರಜಾಪ್ರಭುತ್ವವನ್ನು ಸಂಸದೀಯ ಮಾದರಿ ಎಂದೂ ಗುರುತಿಸಲಾಗುತ್ತದೆ. ಎರಡೂ ಮಾದರಿಗಳಲ್ಲೂ ಕೆಲವೊಂದು ಕೊರತೆಗಳನ್ನು ಗುರುತಿಸಲಾಗುತ್ತದೆ.

ಅತ್ಯಂತ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ವಿಶ್ವದಲ್ಲಿಯೇ ಅತ್ಯಂತ ಸಮರ್ಥವಾದ ಪ್ರಜಾಪ್ರಭುತ್ವದ ಮಾದರಿ ಭಾರತದ ಇತಿಹಾಸ ಪರಂಪರೆ ಹಾಗೂ ಆಡಳಿತ ವ್ಯವಸ್ಥೆಗಳಲ್ಲಿ ಕಾಣಸಿಗುತ್ತದೆ ಎಂಬುದು.

●

**ವ್ಯರ್ಥವಾಗದಿರಲಿ ಪ್ರತಿಯೊಂದು ಮತ, ಇದುವೇ ಪ್ರಜಾಪ್ರಭುತ್ವದ ಹಿತ.**

# ಬಂತು ಚುನಾವಣೆ, ನಮ್ಮ ಓಟು ಯಾರಿಗೆ?





**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಪ್ರಜಾ ಪ್ರತಿನಿಧಿಯ ಲಕ್ಷಣಗಳನ್ನು ಖ್ಯಾತ ಸಾಮಾಜಿಕ ಚಿಂತಕ ಡಿ.ವಿ ಗುಂಡಪ್ಪನವರು ಈ ರೀತಿ ಚಿತ್ರಿಸಿದ್ದಾರೆ. "ಪ್ರಜೆಯ ಪ್ರತಿನಿಧಿಯೆನಿಸಿಕೊಳ್ಳಬೇಕೆಂಬುವವನಲ್ಲಿ ಇರಬೇಕಾದ ಯೋಗ್ಯತೆ ಐದಾರು ಗುಣಗಳ ಒಟ್ಟು ಮೊತ್ತ.

1. ಮೊದಲು ಅವನು ಸತ್ಯ ಪ್ರೀತಿಯೂ, ನ್ಯಾಯ ಪ್ರೀತಿಯೂ ಉಳ್ಳವನಾಗಿರಬೇಕು.
2. ಎರಡನೆಯದಾಗಿ ಅವನಿಗೆ ಸಾರ್ವಜನಿಕ ಪ್ರವೃತ್ತಿಯಿರಬೇಕು.
3. ಮೂರನೆಯದಾಗಿ ಅವನ ಜೀವಿಕೆಗಾಗಿ ಸ್ವಂತ ಕಸುಬೋ, ಆಸ್ತಿಯೋ ಇರಬೇಕು. ರಾಜಕೀಯವೇ ಜೀವನೋಪಾಯ ವಾಗಬಾರದು.
4. ನಾಲ್ಕನೆಯದಾಗಿ, ಅವನಲ್ಲಿ ಗ್ರಂಥ ವ್ಯಾಸಂಗದ ಅಭ್ಯಾಸವೂ, ಪ್ರಶ್ನೆಗಳನ್ನು ವಿಮರ್ಶೆ ಮಾಡುವ ಅಭ್ಯಾಸವೂ ಇರಬೇಕು.
5. ಐದನೆಯುದಾಗಿ, ಅವನಿಗೆ ಕೊಂಚವುಟ್ಟಿಗಾದರೂ ಲೋಕಾನುಭವವಿರಬೇಕು. ಅದಿಲ್ಲದವನ ಬುದ್ಧಿ ಆಕಾಶದಲ್ಲಿ ತೇಲಾಡುತ್ತಿರುತ್ತದೆ.
6. ಆರನೆಯದಾಗಿ ಅವನು ಮಾರ್ಯಾದೆಗಳ ಮೇಲೆ ದೃಷ್ಟಿ ಯುಳ್ಳವನಾಗಿರಬೇಕು. ಸಂಭಾವಿತನಾಗಿರಬೇಕು. ಹೀಗೆ ಲೋಕ ಪರಿಜ್ಞಾನ, ಯುಕ್ತಾಯುಕ್ತ ವಿವೇಚನೆ, ಪ್ರಾಮಾಣಿಕತೆ, ನ್ಯಾಯನಿಷ್ಠೆ, ನಿಸ್ಪೃಹತೆ, ನಿರ್ಭಯ ಮತ್ತು ಸುಸಂಸ್ಕೃತವಾದ ನಡವಳಿಕೆ– ಇವು ಯೋಗ್ಯವಾದ ಸಾರ್ವಜನಿಕ ಲಕ್ಷಣಗಳು."

ಡಿ.ವಿ ಗುಂಡಪ್ಪನವರ ಈ ಮೇಲಿನ ಮಾತುಗಳು ಸಾರ್ವಕಾಲಿಕ, ಸಾರ್ವದೇಶಿಕ.

ಇನ್ನು ಮೂರು ತಿಂಗಳೊಳಗೆ ಒಂದು ಮಹಾ ಚುನಾವಣೆ ಬರಲಿದೆ. ಮೊನ್ನೆ ತಾನೇ 16ನೇ ಲೋಕಸಭೆಯ ಕೊನೇ ಅಧಿವೇಶನ ಮುಕ್ತಾಯಗೊಂಡಿದೆ. 17ನೇ ಲೋಕಸಭೆಗೆ ನಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಹೊತ್ತು ಇದೀಗ ಬಂದಿದೆ. ಕರ್ನಾಟಕದಲ್ಲಿ ಇರುವ 28 ಸ್ಥಾನಗಳಿಗೆ ನೂರಾರು ಜನರು ಸ್ಪರ್ಧಿಸಲಿದ್ದಾರೆ. ಕಾಂಗ್ರೆಸ್, ಜನತಾದಳ, ಬಿಜೆಪಿಯಿಂದ ಕೆಲವರಾದರೆ ಮತ್ತನೇಕರು ಚಿಲ್ಲರೆ ಪಕ್ಷಗಳಿಂದ, ಸ್ವತಂತ್ರ ಅಭ್ಯರ್ಥಿಗಳಾಗಿ. ಮತದಾನಿಗೆ ಯಾರನ್ನು ಆರಿಸಬೇಕೆಂಬುದೇ ಗೊಂದಲ. ಈ ಮಧ್ಯೆ ಹಣ, ಹೆಂಡ, ವಸ್ತ್ರ ಮುಂತಾದ ಆಸೆ–ಆಮಿಷಗಳು ಬೇರೆ. ಇಂಥ ಸಮಯದಲ್ಲೇ ಪೂಜ್ಯ ಡಿವಿಜಿಯವರ ಮಾತುಗಳು ನಮಗೆ ನೆನಪಿಗೆ ಬರಬೇಕು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 71 ವರ್ಷ 6 ತಿಂಗಳು ಉರುಳಿವೆ. ಹೆಚ್ಚು ಕಡಿಮೆ ಇದೇ ಕಾಲಾವಧಿಯಲ್ಲಿ ಸ್ವಾತಂತ್ರ್ಯಗಳಿಸಿದ ಇಸ್ರೇಲ್, ಜಪಾನ್ ದೇಶಗಳ ಅಭಿವೃದ್ಧಿಯ ಕಡೆಗೊಮ್ಮೆ ನೋಡಿ. ಅಲ್ಲಿ ಸಾಮಾನ್ಯ ಪ್ರಜೆ ಅಂದರೆ –'ಆಮ್ ಆದ್ಮಿ'– ನೆಮ್ಮದಿಯ ಬದುಕನ್ನು ಬದುಕುತ್ತಿದ್ದಾನೆ. (ನಮ್ಮಲ್ಲಿ ಆಂ ಆದ್ಮಿ ಪಕ್ಷದವರು ಮಾತ್ರ) ನಾವು ಬಡತನ ನಿವಾರಣೆಯ ಕೂಗನ್ನು ಇಂದಿರಾ ಕಾಲದಿಂದಲೂ ಕೇಳುತ್ತಿದ್ದೇವೆ. ಕೂಗಿದವರ ಗರೀಬೀ ಹಠಾವೋ ಆಯಿತೇ ವಿನಃ ಕೂಗು ಕೇಳಿಸಿಕೊಂಡವರ ಗರೀಬೀ ಹೋಗಲೇ ಇಲ್ಲ, ಅದಿನ್ನೂ ಜಾಸ್ತಿ ಆಗಿ ಆತ್ಮಹತ್ಯೆಯ ಹಂತ ತಲುಪಿದೆ. ಇದಕ್ಕೆ ಕಾರಣ ನಾವು ಆರಿಸಿದ ಚಾರಿತ್ರ್ಯಹೀನರು.

ಇಂದಿನ ಚುನಾವಣೆ ದುಡ್ಡಿದ್ದವನ ಕೇಂದ್ರವಾಗಿದೆ. 'ದುಡ್ಡಿದ್ದವನೇ ದೊಡ್ಡಪ್ಪ'. ಇನ್ನು ರಾಜಕೀಯ ಪಕ್ಷಗಳಂತೂ ಅಂಥವರಿಗೆ ಮಣೆ ಹಾಕುತ್ತವೆ. ಕಳೆದ ಅನೇಕ ಲೋಕಸಭೆಯ ಸಂಸದರು ಜೈಲಿಗೆ ಹೋಗಿರುವುದನ್ನು ಕೇಳಿದ್ದೇವೆ. ಸ್ಪರ್ಧಿಗಳು ಚುನಾವಣಾ ಆಯೋಗಕ್ಕೆ ಸಲ್ಲಿಸುವ ಅವರ ಜಾತಕ ಓದಿದರೆ ಅಸಹ್ಯವಾಗುತ್ತದೆ. ಓರ್ವ ಶಾಸಕನ ಹಸುಗೂಸು ಮೊಮ್ಮಗನ ಆಸ್ತಿ ಅವರಪ್ಪ, ಅಮ್ಮ, ತಾತ, ಅಜ್ಜಿಯರ ಒಟ್ಟು ಆಸ್ತಿಗಿಂತ ಅಧಿಕ. ಅವರ ಮನೆಯಲ್ಲಿ ಕುಬೇರನೇ ಭಂಡಾರ ಸಹಿತ ಹುಟ್ಟಿರಬೇಕು! ಇಂಥ ಪ್ರನಿನಿಧಿಗಳು ಜನಸೇವಕರಾಗುವರೇ? ಒಂದು ಕ್ಷಣ ಯೋಚಿಸಿ.

ಪ್ರಜಾಪ್ರಭುತ್ವದಲ್ಲಿ ಬಹುಮತದ ಪಕ್ಷ ಅಧಿಕಾರಕ್ಕೆ ಬರುತ್ತದೆ. ಬಿಡಿ ಪ್ರತಿನಿಧಿಗಳು ಸಜ್ಜನರಾದರೂ ಅವರ ಕೂಗಿಗೆ ಬೆಲೆ ಇರುವುದಿಲ್ಲ. ಆದ್ದರಿಂದ ನಾವು ಪಕ್ಷಗಳನ್ನು ಅದರಲ್ಲೂ ರಾಷ್ಟ್ರೀಯ ಪಕ್ಷಗಳಿಗೆ ಮತನೀಡಬೇಕು. ಸ್ಥಾನೀಯ ಪಕ್ಷಗಳು ರಾಷ್ಟ್ರೀಯ ಚಿಂತನೆ ಮಾಡಲಾರವು. ಹಲವು ಸ್ಥಾನೀಯ ಪಕ್ಷಗಳು ಒಗ್ಗೂಡಿದರೂ ಅದು ಕೂಪ ಮಂಡೂಕಗಳಾಗೇ ಯೋಚಿಸುತ್ತವೆ.

**ಪುಟ 9 ಕ್ಕೆ ➤**

# ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಕಾರ್ಯಕಾರಿಣಿ ಸಭೆ

"ಸಂಘಟನೆ ಎಂಬುದು ಕೇವಲ ಗುಂಪು ಕಟ್ಟುವುದಲ್ಲ. ಸಂಘಟಕ ಎಂದರೆ ಎಲ್ಲರನ್ನು ಜೊತೆಗೆ ಕೊಂಡೊಯ್ಯಬೇಕು ಎಲ್ಲ ಕಾರ್ಯಗಳಲ್ಲೂ ಎಲ್ಲರನ್ನು ತೊಡಗಿಸಿಕೊಂಡು ಎಲ್ಲರನ್ನು ನಮ್ಮೊಂದಿಗೆ ಬೆಳೆಸುತ್ತಾ ಹೋಗಬೇಕು" ಎಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಸಂಘಟನಾ ಮಂತ್ರಿಗಳಾದ ಶ್ರೀಯುತ ಮಹೇಂದ್ರ ಕಪೂರ್‌ಜಿರವರು ದಿನಾಂಕ 2 ಮತ್ತು 3 ಫೆಬ್ರವರಿ 2019ರಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಕಾರ್ಯಕಾರಿಣಿಯ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು. ಮುಂಬೈ ಮಹಾನಗರದ ಲೋಯರ್ ಪರೇಲ್‌ನಲ್ಲಿರುವ ಯಶವಂತ ಭವನದಲ್ಲಿ ದೇಶದ 17 ರಾಜ್ಯಗಳಿಂದ 80 ಪ್ರತಿನಿಧಿಗಳು ಈ ಕಾರ್ಯಕಾರಿಣಿಯಲ್ಲಿ ಉಪಸ್ಥಿತರಿದ್ದರು.

ವಿವಿಧ ರಾಜ್ಯಗಳಿಂದ ಬಂದಿದ್ದ ಪ್ರತಿನಿಧಿಗಳು ವಿಭಾಗವಾರು ಬೈಠಕ್‌ಗಳಲ್ಲಿ ತಮ್ಮ ರಾಜ್ಯಗಳಲ್ಲಿರುವ ಸಮಸ್ಯೆಗಳ ಬಗ್ಗೆ ಅಳಲು ತೋಡಿಕೊಂಡರು. ಉದಾ– ದೆಹಲಿಯಲ್ಲಿ ಶಿಕ್ಷಕರಿಗೆ ಕೇವಲ ವರ್ಷಕ್ಕೆ 8 ದಿನ ಮಾತ್ರ ಸಾಂದರ್ಭಿಕ ರಜೆಗಳಿವೆ. ಅದು ಮುಗಿದಲ್ಲಿ ವೈದ್ಯಕೀಯ ಪ್ರಮಾಣಪತ್ರ ನೀಡಿ ರಜೆ ಪಡೆಯಬೇಕು. ಇದರ ವಿಪರ್ಯಾಸ ಹೇಗೆಂದರೆ ತನ್ನದೇ ಮದುವೆಗಾಗಿ ರಜೆ ಪಡೆಯಬೇಕಾದ ಶಿಕ್ಷಕ ಆಹ್ವಾನ ಪತ್ರಿಕೆಯ ಜೊತೆ ವೈದ್ಯಕೀಯ ಪ್ರಮಾಣಪತ್ರವನ್ನೂ ನೀಡಬೇಕು. ಹೀಗೆ ಪ್ರಾಥಮಿಕ, ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ವಿಭಾಗಗಳಲ್ಲಿ ಬಂದ ಸಮಸ್ಯೆಗಳ ಪರಿಹಾರಕ್ಕಾಗಿ ಆಲೋಚನೆಗಳನ್ನು ಮಾಡಲಾಯಿತು. ಆರ್ ಟಿ ಇ ಹಾಗೂ ಖಾಸಗಿ ಶಾಲೆಗಳ ಆರಂಭಕ್ಕೆ ಸರ್ಕಾರ ಅನುಮತಿ ಕೊಡುತ್ತಿರುವುದು ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಇಳಿಕೆಗೆ ಕಾರಣವೆಂಬುದು ಎಲ್ಲ ರಾಜ್ಯಗಳ ಅಭಿಪ್ರಾಯ.

ಮಹೇಂದ್ರ ಕುಮಾರ್‌ರವರು ಶಾಶ್ವತ ಜೀವನ ಮೌಲ್ಯಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಬಗ್ಗೆ ತಿಳಿಸಿದರು. ಮಹೇಂದ್ರ ಕಪೂರ್‌ರವರು ಮುಂದಿನ ಶೈಕ್ಷಣಿಕ ವರ್ಷದ ವಾರ್ಷಿಕ ಯೋಜನೆಯ ಬಗ್ಗೆ ತಿಳಿಸಿದರು. ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಮಹಾಮಂತ್ರಿ ಶ್ರೀ ಶಿವಾನಂದ ಸಿಂಧನಕೇರಾ, ದಕ್ಷಿಣ ಪ್ರಾಂತೀಯ ಮಂತ್ರಿ ಶ್ರೀ ಬಾಲಕೃಷ್ಣಭಟ್, ಪೋಷಕರಾದ ಶ್ರೀ ಹೆಚ್ ನಾಗಭೂಷಣ ರಾವ್, ಮಹಿಳಾ ವಿಭಾಗದ ಸಹಕಾರ್ಯದರ್ಶಿ ಶ್ರೀಮತಿ ಡಿ.ಕೆ ಮಮತಾ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀಯುತ ಸಂದೀಪ್ ಬೂದಿಹಾಳ್, ಪ್ರಧಾನ ಕಾರ್ಯದರ್ಶಿ ಶ್ರೀ ಚಿದಾನಂದ ಪಾಟೀಲ್, ಉಪಾಧ್ಯಕ್ಷರಾದ ಶ್ರೀ ಗಂಗಾಧರಾಚಾರಿ, ಮಹಿಳಾ ಪ್ರಮುಖರಾದ ಶ್ರೀಮತಿ ಜಿ ಎನ್ ವಾಸುಕಿ ಕರ್ನಾಟಕದಿಂದ ಭಾಗವಹಿಸಿದ್ದರು. •

# ಸಂಕಲ್ಪ ದಿನಾಚರಣೆ, ಡೈರಿ ಬಿಡುಗಡೆ ಕಾರ್ಯಕ್ರಮ

**ಬೀದರ:** ಮಾಧ್ಯಮಿಕ ಶಿಕ್ಷಕರ ಸಂಘದ ಗೌರವ ಸಲಹೆಗಾರರಾದ ಶ್ರೀ ಎನ್.ಪೆಂಟಾರೆಡ್ಡಿಯವರು ಸಂಕಲ್ಪ ದಿನಾಚರಣೆ ಪ್ರಯುಕ್ತ ಶಿಕ್ಷಕರಿಗೆ ಸಂಕಲ್ಪ ಪ್ರತಿಜ್ಞಾ ಪ್ರಮಾಣ ವಚನ ಬೋಧಿಸಿದರು.

ಪದವಿಪೂರ್ವ ಶಿಕ್ಷಣ ಇಲಾಖೆ ಬೀದರನ ಉಪನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಎಸ್. ರವರು ಪದವಿಪೂರ್ವ ಉಪನ್ಯಾಸಕರ ಸಂಘದ ಡೈರಿ ಬಿಡುಗಡೆ ಮಾಡಿ ಮಾತನಾಡಿ "ಕರ್ನಾಟಕದಲ್ಲಿ ಬೀದರ ಜಿಲ್ಲೆಯು ಕಿರೀಟದಲ್ಲಿದೆ. ಆದರೆ ಪಿಯುಸಿ ಫಲಿತಾಂಶದಲ್ಲಿ ಕೆಳಮಟ್ಟದಲ್ಲಿದೆ. ಈ ಹಣೆಪಟ್ಟಿಯನ್ನು ನಿವಾರಣೆ ಮಾಡಲು ಶಿಕ್ಷಕರಿಗೆ ಪರೀಕ್ಷೆ ಫಲಿತಾಂಶ ಸುಧಾರಣೆ ಕಾರ್ಯಗಾರ ಹಮ್ಮಿಕೊಳ್ಳಲಾಗಿದೆ. ಸರಳ ರೀತಿಯಿಂದ ವಿವಿಧ ವಿಷಯಗಳ ಕೈಪಿಡಿ ಸಿದ್ಧಪಡಿಸಿದ್ದು ಮಕ್ಕಳು ಅಧ್ಯಯನ ಮಾಡಿದರೆ ಕನಿಷ್ಠ 50 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಕೊಳ್ಳಬಹುದು ಎಂದು ತಿಳಿಸುತ್ತಾ ಉಪನ್ಯಾಸಕ ವರ್ಗದವರು ಫಲಿತಾಂಶ ಮೇಲ್ಮಟ್ಟಕ್ಕೆ ತರಲು ಪ್ರಯತ್ನಶೀಲರಾಗಬೇಕು" ಎಂದು ತಿಳಿಸಿದರು.

ಮಾಧ್ಯಮಿಕ ಶಿಕ್ಷಕರ ಸಂಘದ ಡೈರಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿಗಳಾದ ಶ್ರೀ ಶಿವಕುಮಾರ ಸ್ವಾಮಿಯವರು ಬಿಡುಗಡೆ ಮಾಡಿ ಮಾತನಾಡಿ "ಪ್ರೌಢ ಶಾಲೆಯ ಮುಖ್ಯ ಗುರುಗಳು ಶಿಕ್ಷಕರು ಜಿಲ್ಲೆಯ ಎಸ್.ಎಸ್.ಎಲ್.ಸಿ. ಫಲಿತಾಂಶವನ್ನು ಸುಧಾರಣೆ ಮಾಡುವಲ್ಲಿ ನಿರಂತರ ಪ್ರಯತ್ನಶೀಲತೆ ಅವಶ್ಯಕತೆ ಇದೆ. ಘಟಕ ಪರೀಕ್ಷೆ, ತ್ರೈಮಾಸಿಕ ಪರೀಕ್ಷೆ, ಗುಂಪು ಚಟುವಟಿಕೆ, ಪರಿಹಾರ ಬೋಧಕ ತರಗತಿಗಳ ಮುಖಾಂತರ ಪರೀಕ್ಷೆಯ ಫಲಿತಾಂಶ ಸುಧಾರಣೆ ಮಾಡಲು ಸಾಧ್ಯವಿದೆ. ಅದೇ ರೀತಿಯಾಗಿ ಪರೀಕ್ಷೆ ಭಯ ಭೀತಿಯನ್ನು ಹೋಗಲಾಡಿಸಲು ಶಿಕ್ಷಕರು ಮಕ್ಕಳ ಜೊತೆಗೆ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕು ಎಂಬುದನ್ನು ಚರ್ಚಿಸಿ ಪರೀಕ್ಷೆ ಸಿದ್ಧತೆ ಹೇಗೆ ಮಾಡಬೇಕೆಂಬುದನ್ನು ಯೋಜನೆ ಹಾಕಿ ಜಿಲ್ಲೆಯ ಪರೀಕ್ಷೆ ಫಲಿತಾಂಶ ಉತ್ತಮ ರೀತಿಯಲ್ಲಿ ಬರುವಂತೆ ಶ್ರಮ ವಹಿಸಬೇಕು" ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರಾಂಶುಪಾಲರ ಸಂಘದ ಗೌರವಾಧ್ಯಕ್ಷರಾದ ಶ್ರೀ ಶಿವರಾಜ ಪಾಟೀಲರವರು, ಅಧ್ಯಕ್ಷರಾದ ಹಣಮಂತರಾವ ಮೈಲಾರೆ ಹಾಗೂ ಸಂಘದ ಕಾರ್ಯದರ್ಶಿಗಳಾದ ಶ್ರೀ ವಿಠಲದಾಸ ಪ್ಯಾಗೆ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಪನ್ಯಾಸಕರ ಸಂಘದ ಗೌರವಾಧ್ಯಕ್ಷರಾದ ಶ್ರೀ ಬಸವರಾಜ ಸ್ವಾಮಿ ವಹಿಸಿ ಮಾತನಾಡಿದರು. ಉಪನ್ಯಾಸಕರ ಸಂಘದ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ಎಣಕೆಮುರೆಯವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರಾಚಾರ್ಯರಾದ ಶ್ರೀಮತಿ ಪ್ರತಿಭಾ ಡಿ. ಪ್ರಾರ್ಥನಾ ಗೀತೆ ಹಾಡಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ಶಾಂತಕುಮಾರ ಬಿರಾದಾರ ಸ್ವಾಗತ ಕೋರಿದರು. ಶಿವಕುಮಾರ ಸಾಲಿ ನಿರೂಪಿಸಿದರು. ಉಪನ್ಯಾಸಕರ ಸಂಘದ ಅಧ್ಯಕ್ಷರಾದ ರಾಜಶೇಖರ ಮಂಗಲಗಿ ವಂದಿಸಿದರು. •

ಭೂರಮೆ

# ಮತದಾನದಲ್ಲಿ ಮಹಿಳೆಯ ಪಾತ್ರ

■ **ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು**

ಅಂದು, ಲೋಕಮಾನ್ಯ ತಿಲಕರ "ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು" ಎಂಬ ಘೋಷಣೆ ಭಾರತೀಯರಲ್ಲಿ ಮುದುಡಿದ್ದ ದೇಶಪ್ರೇಮವನ್ನು ಬಡಿದು ಎಚ್ಚರಿಸಿತ್ತು. ಅದೇ ರೀತಿ 'ಮತದಾನ'ವೆನ್ನುವುದು ಪ್ರಜಾಪ್ರಭುತ್ವ ಆಡಳಿತದಲ್ಲಿ ಪ್ರತಿಯೊಬ್ಬ ಪ್ರಜೆಯ ಜನ್ಮಸಿದ್ಧ ಹಕ್ಕು ಎನಿಸಿಕೊಂಡಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೆ ಸಾರ್ವಜನಿಕವಾದ ಎಲ್ಲ ವಿಚಾರಗಳಲ್ಲಿ ಪಾಲ್ಗೊಳ್ಳುವ, ಅವುಗಳಿಗೆ ಸ್ಪಂದಿಸುವ ಸಾಧ್ಯತೆಯೇ ಪ್ರಜಾಪ್ರಭುತ್ವ ನೀತಿಯ ಪ್ರಧಾನ ಅಂಶವೆನಿಸುತ್ತದೆ. ಅದೇ ರೀತಿ ಮಹಿಳೆಯೊಬ್ಬಳ ರಾಜಕೀಯ ಪ್ರವೇಶದ ಪ್ರಾಥಮಿಕ ಹೆಜ್ಜೆ ಆಕೆ ತನ್ನ ಮತದಾನದ ಹಕ್ಕನ್ನು ಸ್ಥಾಪಿಸುವುದಾಗಿರುತ್ತದೆ. ರಾಜಕೀಯ ಪ್ರವೇಶದ ಹಾಗೂ ಆ ಕ್ಷೇತ್ರದಲ್ಲಿ ಮಹಿಳೆ ಮಾಡಿದ ದಾಖಲೆಯ ಸಾಧನೆಗಳ ಹಲವಾರು ದೃಷ್ಟಾಂತಗಳು ನಮ್ಮ ಇತಿಹಾಸದಲ್ಲಿ ಸಮೃದ್ಧಿಯಾಗಿವೆಯಾದರೂ ಪ್ರಜಾಪ್ರಭುತ್ವದ ಚರಿತ್ರೆಯಲ್ಲಿ ಆಕೆಯ ಪ್ರವೇಶ, ಪಾತ್ರ, ಮಹತ್ತ್ವದ ಕುರಿತು ತಿಳಿಯಬೇಕಾಗಿದೆ.

ಮತದಾನದಲ್ಲಿ ಮಹಿಳೆಯ ಈ ಪಾತ್ರದ ಔಚಿತ್ಯದ ಬಗ್ಗೆ ವಿಚಾರ ಮಾಡುವಾಗ ಆಕೆಯು ಈ ಹಕ್ಕನ್ನು ಪಡೆದುಕೊಂಡ ಚರಿತ್ರೆಯನ್ನು ತಿಳಿಯುವುದೂ ಅವಶ್ಯವಾಗಿದೆ. ರಾಷ್ಟ್ರ ಮತ್ತು ಜಾಗತಿಕ ಮಟ್ಟಗಳೆರಡರಲ್ಲಿಯೂ ಇದರ ಹಿನ್ನೆಲೆ ಸ್ವಾರಸ್ಯಕರವಾಗಿದೆ. ಉದ್ಯೋಗ ಕ್ಷೇತ್ರದಲ್ಲಿ ಪುರುಷರಿಗೆ ಸಮಾನವಾದ ಸ್ಥಾನಮಾನವನ್ನು, ಅವಕಾಶಗಳನ್ನು ನೀಡಬೇಕೆಂಬ ಬೇಡಿಕೆಯೊಡನೆ ಈ ಕಾರ್ಯದ ಪೂರ್ವಭಾವೀ ಹಂತದ ಹೋರಾಟ ಫ್ರಾನ್ಸ್‌ನಲ್ಲಿ ಪ್ರಾರಂಭವಾಗಿ ಅಂಕುರಾರ್ಪಣೆಯಾಗಿತ್ತು. ಮುಂದಿನ ಹಂತವಾಗಿ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಬೇಕೆಂಬ ಒಕ್ಕೊರಲ ಕೂಗು ಮೊಳಗಿತ್ತು. 1893 ರಲ್ಲಿ ಬ್ರಿಟಿಷ್ ಕಾಲೋನಿಯ ಸ್ವಯಂ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದ ನ್ಯೂಜಿಲೆಂಡ್ ವಯಸ್ಕ ಮಹಿಳೆಗೆ ಮತದಾನದ ಹಕ್ಕನ್ನು ನೀಡಿ ಜಾರಿಗೆ ತಂದ ಮೊಟ್ಟಮೊದಲ ದೇಶವೆನಿಸಿಕೊಂಡಿತು. ನಂತರ, ಮಹಿಳೆಗೆ ಮತದಾನದ ಹಕ್ಕನ್ನು ಮೊದಲಿಗೆ ನೀಡಿದ ಮೊದಲ ಯುರೋಪಿಯನ್ ದೇಶವೆಂಬ ಹಿರಿಮೆಗೆ ಫಿನ್‌ಲ್ಯಾಂಡ್ ಪಾತ್ರವಾಯಿತು. ರಷ್ಯಾದ ಕೆಲವು ಪ್ರದೇಶಗಳು 1907ರ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಮಹಿಳಾ ಸದಸ್ಯರನ್ನು ಚುನಾಯಿಸುವ ನಿರ್ಧಾರವನ್ನು ಕಾರ್ಯಗತಗೊಳಿಸಿದ್ದುವು. 1913ರಲ್ಲಿ ನಾರ್ವೆ ಅದನ್ನು ಅನುಸರಿಸಿತ್ತು. ಕ್ರಮೇಣ ಇನ್ನಿತರ ಪ್ರದೇಶಗಳೂ ತಮ್ಮ ಕೈ ಜೋಡಿಸಿದ್ದುವು. 1914ರಲ್ಲಿ ಮಾರ್ಚ್ 8ರ ದಿನವನ್ನು ಮೊದಲ ಬಾರಿಗೆ 'ಅಂತರಾಷ್ಟ್ರೀಯ ಮಹಿಳಾ ದಿನ'ವೆಂದು ಘೋಷಿಸಿದಾಗ ಅದನ್ನು ಮಹಿಳೆಯ ಮತದಾನದ ಹಕ್ಕಿಗಾಗಿ ಅರ್ಪಿಸಲಾಗಿತ್ತು. ಇತ್ತೀಚೆಗೆ ಅಂದರೆ 2008ರಲ್ಲಿ ಮಹಿಳೆಗೆ ಮತದಾನದ ಹಕ್ಕನ್ನು ಘೋಷಿಸಿ ಆಕೆಯ ಜನ್ಮಸಿದ್ಧ ಹಕ್ಕನ್ನು ನೀಡಿದ ದೇಶಗಳಲ್ಲಿ ಭೂತಾನ್ ಕೂಡ ಸೇರಿಕೊಂಡಿತ್ತು.

ಇನ್ನು ಭಾರತ ಈ ನಿಟ್ಟಿನಲ್ಲಿ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. 'ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ' ಎಂಬ ಹೇಳಿಕೆಯಲ್ಲಿ ನಂಬಿಕೆಯಿಟ್ಟು ನಡೆದುಕೊಂಡವರು ಭಾರತೀಯರು. ಅಂತೆಯೇ "ನಾವು ಕೇವಲ ಜನರು ಮಾತ್ರವೇ ಅಲ್ಲ, ನಾವು ಒಂದು ಶಕ್ತಿ" ಎಂಬ ಆತ್ಮವಿಶ್ವಾಸದ ನುಡಿಗಳನ್ನು ಗೌರವಿಸುತ್ತ ಆಕೆಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಮತದಾನದ ಹಕ್ಕು ಸೇರಿದಂತೆ ಎಲ್ಲ ಮೂಲಭೂತ ಹಕ್ಕುಗಳನ್ನು ಹೊಂದುವ ಸ್ವಾತಂತ್ರ್ಯ ದೊರಕಿತ್ತು.

ಲಾರ್ಡ್ ಎಡ್ವಿನ್ ಮಾಂಟೆಗೂ ಎಂಬ ಭಾರತದ ವಿದೇಶೀ ನೀತಿಗೆ ಸಂಬಂಧಿಸಿದ ರಾಜ್ಯ ಕಾರ್ಯದರ್ಶಿ ಇಲ್ಲಿ ವೈಸ್‌ರಾಯ್ ಆಗಿದ್ದ ಲಾರ್ಡ್ ಚೇಮ್ಸ್‌ಫೋರ್ಡ್‌ರೊಂದಿಗೆ ಕಾರ್ಯ ನಿರ್ವಹಿಸಲು ಆಗಮಿಸಿದ. ದೇಶದಲ್ಲಿ ಸಾಂವಿಧಾನಿಕ ಸುಧಾರಣೆಗಳನ್ನು ತರುವುದಕ್ಕಾಗಿ ಮೊದಲಿಗೆ ಇಲ್ಲಿನ ರಾಜಕೀಯ ಪರಿಸ್ಥಿತಿಯ ಪರಿವೀಕ್ಷಣೆ ಅವನ ಉದ್ದೇಶವಾಗಿತ್ತು. ಅದು ಭಾರತೀಯ ಮಹಿಳೆಯರು ತಮ್ಮ ರಾಜಕೀಯ ಹಕ್ಕಿಗಾಗಿ ಒತ್ತಾಯ ತರಲು ಸೂಕ್ತ ಸಂದರ್ಭವಾಗಿತ್ತು. ಆಗ, ಅಂದರೆ, 1917 ರಲ್ಲಿ ಆ್ಯನಿಬೆಸೆಂಟ್, ಮಾರ್ಗರೆಟ್ ಕಸಿನ್ಸೆ ಮತ್ತು ಡೊರೊಥಿ ಜಿನರಾಜದಾಸ್ ಎಂಬ ಮೂವರು ಐರಿಷ್ ಮಹಿಳೆಯರ ನೇತೃತ್ವದಲ್ಲಿ ಭಾರತೀಯ ಮಹಿಳಾ ಸಂಸ್ಥೆಯೊಂದು ಅಸ್ತಿತ್ವಕ್ಕೆ ಬಂದಿತ್ತು. ಇಪ್ಪತ್ತೂರು ಮಂದಿ (ದೇಶದ ಬೇರೆ ಬೇರೆ ಭಾಗಗಳಿಗೆ ಸೇರಿದ) ಮಹಿಳೆಯರು ಸಹಿ ಹಾಕಿದ, ಮತದಾನದ ಹಕ್ಕನ್ನು ಪಡೆಯಬೇಕೆಂದು ಮಾಡಿದ ಮನವಿಯೊಂದನ್ನು ಚೇಮ್ಸ್ ಫೋರ್ಡ್ ಮತ್ತು ಮಾಂಟೆಗೂ ಅವರಿಗೆ ನೀಡಲಾಯಿತು. ರಾಜಕೀಯವಾಗಿ ದನಿಯೆತ್ತಲು ಅದು ಮಹಿಳೆಯರಿಗೆ ಸಹಕಾರಿಯಾಗುವ ಹಂತವಾಗಿತ್ತು. 1917 ರಲ್ಲಿಯೇ ಕಲ್ಕತ್ತದಲ್ಲಿ ನಡೆದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಆ್ಯನಿಬೆಸೆಂಟ್ ಮಹಿಳೆಯರು ಮತದಾನದ ಹಕ್ಕಿಗಾಗಿ ಸಲ್ಲಿಸಿದ್ದ ಆ ಮನವಿಯನ್ನು ಬೆಂಬಲಿಸಿದ್ದರು. ಮುಸ್ಲಿಂ ಲೀಗ್ ಕೂಡ ತನ್ನ ಸಹಮತವನ್ನು ವ್ಯಕ್ತಪಡಿಸಿತ್ತು. ನಂತರ ಅದಕ್ಕಾಗಿ ಸಮಿತಿಯೊಂದನ್ನು ನೇಮಕ ಮಾಡಿ ದೇಶದಾದ್ಯಂತ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ವಹಿಸಲಾಯಿತು. ಆದರೆ ಪರಿಣಾಮವಾಗಿ ಮಹಿಳೆಯರ ಆ ಮನವಿ ಒಪ್ಪಿತವಾದರೂ ಭಾರತೀಯ ಮಹಿಳೆಯರು ಮತದಾನದ ಹಕ್ಕನ್ನು ಪಡೆದುಕೊಳ್ಳುವ ಅರ್ಹತೆಗೆ ಸಿದ್ಧರಾಗಿಲ್ಲವೆಂಬ ಅಭಿಪ್ರಾಯವು ಸೂಚಿತವಾಗಿತ್ತು. ಆದರೆ, ಮುಂದಿನ ಬೆಳವಣಿಗೆಯಲ್ಲಿ ಪಾರ್ಲಿಮೆಂಟಿನ ಜಂಟಿ ಸಮಿತಿಯು ಮನವಿಗೆ ಸ್ಪಂದಿಸಿ ಪುರುಷ, ಮಹಿಳೆಯರ ನಡುವಿನ ಅಸಮಾನತೆಯನ್ನು ತೆಗೆದು ಹಾಕಲು ನಿರ್ಧರಿಸಿದರೂ ಮತದಾನಕ್ಕೆ ಸಂಬಂಧಿಸಿದಂತೆ ತೀರ್ಮಾನಿಸುವ ಅಧಿಕಾರವನ್ನು ದೇಶೀ ಸಂಸ್ಥಾನಗಳ ಆಡಳಿತಾಧಿಕಾರಿಗಳಿಗೇ ನೀಡಿ ಕೈತೊಳೆದುಕೊಂಡಿತ್ತು. ಕಡೆಗೆ, 1920ರಲ್ಲಿ ತಿರುವಾಂಕೂರು (ಕೊಚ್ಚಿನ್) ದೇಶೀ ಸಂಸ್ಥಾನವು ಮೊಟ್ಟಮೊದಲಿಗೆ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿದ ಮೊದಲ ರಾಜ್ಯವೆನಿಸಿಕೊಂಡಿತು. ನಂತರ ಮದರಾಸು ಹಾಗೂ ಬೊಂಬಾಯಿ 1921ರಲ್ಲಿ ಅದನ್ನು ಅನುಸರಿಸಿದ್ದುವು. ಕ್ರಮೇಣ ಇತರ ರಾಜ್ಯಗಳೂ ಒಪ್ಪಿದವು.

ಮತದಾನದ ಹಕ್ಕನ್ನು ನೀಡಿದ್ದರೂ ಅದು ಸೀಮಿತವಾಗಿದ್ದು ಕೆಲವು ನಿಯಮಗಳಿಗೆ ಬದ್ಧವಾಗಿತ್ತು. ಮಹಿಳೆಯು ವಿವಾಹಿತಳಾಗಿದ್ದು ಆಸ್ತಿ ಮತ್ತು ಶಿಕ್ಷಣವನ್ನು ಹೊಂದಿರಬೇಕಾಗಿತ್ತು. ನಂತರ 1935 ರ ಭಾರತೀಯ ಕಾಯಿದೆಯ ಅನ್ವಯ 21 ವರ್ಷಗಳು ತುಂಬಿದ ಪ್ರತಿಯೊಬ್ಬ ಮಹಿಳೆಯೂ

**ಪುಟ 9 ಕ್ಕೆ ➤**

# ರಾಜ್ಯ ಮಟ್ಟದ ಹಿಂದಿ ಶಿಕ್ಷಕರ ಕಾರ್ಯಾಗಾರ

ಮೌಲ್ಯಮಾಪನ ಬಹುದೊಡ್ಡ ವಿಚಾರವಾಗಿದ್ದು, ಅದನ್ನು ಬಹು ಎಚ್ಚರಿಕೆಯಿಂದ ನಿಭಾಯಿಸಬೇಕಾಗಿದೆ ಎಂದು ಬೆಂಗಳೂರಿನ ಶೇಷಾದ್ರಿಪುರನಲ್ಲಿರುವ ಸಂಘದ ಕಾರ್ಯಾಲಯ ಯಾದವಸ್ಮೃತಿಯಲ್ಲಿ ದಿನಾಂಕ 10-2-2019ರಂದು ಬೆಳಿಗ್ಗೆ 10 ಗಂಟೆಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಹಿಂದಿ ಶಿಕ್ಷಕರ ಕಾರ್ಯಾಗಾರದಲ್ಲಿ ಶೈಕ್ಷಿಕ್ ಮಹಾಸಂಘದ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಶಿವಾನಂದ ಸಿಂಧನಕೇರಾರವರು ಹೇಳಿದರು. ವಂದೇ ಮಾತರಂ ಮತ್ತು ತಾಯಿ ಶಾರದೆಯನ್ನು ನೆನೆಯುತ್ತ ಇಂದಿನ ಶಿಕ್ಷಣ ಮತ್ತು ಶಿಕ್ಷಕರ ಕಾರ್ಯಗಳ ಬಗ್ಗೆ ಮಾತನಾಡುತ್ತಾ, ಇಂದು ಪ್ರೌಢಶಿಕ್ಷಣ ಎಂಬ ಶಬ್ದವನ್ನು ಬಳಸಲಾಗುತ್ತಿದೆ, ಅದು ಪ್ರೌಡಶಿಕ್ಷಣವಲ್ಲ ಮಾಧ್ಯಮಿಕ ಶಿಕ್ಷಣ ಎಂದಾಗಬೇಕು, ಈ ಸಂಘವನ್ನು ಕಟ್ಟಿ ಬೆಳೆಸಿದ ಕೃ ನರಹರಿ ಸರ್‌ರವರು 50 ವರ್ಷಗಳ ಹಿಂದೆಯೇ ಮಾಧ್ಯಮಿಕ ಶಿಕ್ಷಣ ಎಂದು ಹೇಳಿದ್ದನ್ನು ಇಂದು ನಮ್ಮ ರಾಜ್ಯ ಶಿಕ್ಷಣದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಸಂಘವು ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಬಹುದೊಡ್ಡ ಜವಾಬ್ದಾರಿ ನಿರ್ವಹಿಸಿದೆ ಎಂದು ತಿಳಿಸಿದರು ಈ ಕಾರ್ಯಕ್ರಮವು ಸರಿಯಾಗಿ ಬೆಳಿಗ್ಗೆ 10 ಗಂಟೆಗೆ ಶ್ರೀಮತಿ ತ್ರಿವೇಣಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ಮಹಿಳಾ ವಿಭಾಗದ ಸಹಕಾರ್ಯದರ್ಶಿಯಾಗಿರುವ ಶ್ರೀಮತಿ ಮಮತ ಡಿ.ಕೆ ರವರು ವೇದಿಕೆ ಮೇಲೆ ಇರುವ ಎಲ್ಲಾ ಗಣ್ಯರನ್ನು ಸ್ವಾಗತಿಸಿದರು.

ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಚಿದಾನಂದ ಪಾಟೀಲ್‌ರವರು ಪ್ರಾಸ್ತಾವಿಕ ಭಾಷಣ ಮಾಡಿದರು.

ಶಿಕ್ಷಕ ಸಂಘದ ಕಾರ್ಯಾಲಯ ಪ್ರಮುಖರಾದ ಶ್ರೀ ಜಿ.ಎಸ್ ಕೃಷ್ಣಮೂರ್ತಿಯವರು ಶಿಕ್ಷಕರಿಗೆ ಸಂಬಳವನ್ನು ಕೈಗೆ ಕೊಡುತ್ತಿದ್ದ ಕಾಲವನ್ನು ನೆನಪಿಸಿಕೊಂಡು ಅದನ್ನು ಚೆಕ್ ಮುಖಾಂತರ ಶಿಕ್ಷಕರ ಕೈ ಸೇರಬೇಕು ಎಂದು ಹೋರಾಡಿದವರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದವರು ಮತ್ತು ಅದರಲ್ಲಿ ಸಫಲತೆಯನ್ನು ಸಹ ಪಡೆದೆವು ಎಂದು ಹೇಳಿದರು ಮತ್ತು ಅನೇಕ ಉದಾಹರಣೆಗಳನ್ನು ನೀಡುತ್ತ ಸಂಘ ನಡೆದು ಬಂದ 50 ವರ್ಷಗಳ ಹಾದಿಯನ್ನು ನೆನಪಿಸಿಕೊಂಡರು.

ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ್‌ರವರು ಕೃಷ್ಣಮೂರ್ತಿರವರ ಸಾಧನೆಯ ಹಾದಿ ಬಗ್ಗೆ ಇನ್ನಷ್ಟು ವಿವರವಾಗಿ ತಿಳಿಯ ಪಡಿಸಿದರು. ಶ್ರೀ ಚಿದಾನಂದ ಪಾಟೀಲ್‌ರವರು ಅಧ್ಯಾಪಕರುಗಳ ಸಮಸ್ಯೆಯನ್ನು ಬಗೆಹರಿಸುವಲ್ಲಿ ತಾವು ಮತ್ತು ಸಂಘವು ಸಕ್ರಿಯವಾಗಿ ಪಾತ್ರ ವಹಿಸುವುದರ ಬಗ್ಗೆ ತಿಳಿಸಿದರು. ಶಿಕ್ಷಕ ಸಂಘದ ಸಹ ಕಾರ್ಯದರ್ಶಿ ಶ್ರೀ ಗಂಗಾಧರಾಚಾರಿಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮದ ಮೊದಲನೇ ಅವಧಿ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಕಾರ್ಯಾಗಾರದ ಎರಡನೇ ಅವಧಿಯು ಶ್ರೀಮತಿ ಗಿರಿಜಾರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಹಿಂದಿ ವಿಷಯದ ಸಂಪನ್ಮೂಲವ್ಯಕ್ತಿಗಳಾಗಿ ಹೊಳೆನರಸೀಪುರ, ಹಾಸನದ ಶಶಿಧರ್‌ಸಿಂಗ್‌ರವರು ಮೌಲ್ಯಮಾಪನದ ಬಗ್ಗೆ ಸುದೀರ್ಘವಾಗಿ 2 ಗಂಟೆಗಳ ಕಾಲ ತಿಳಿಯಪಡಿಸಿದರು. ಮೊದಲು ಅಧ್ಯಾಪಕರು ಅಧ್ಯಯನವನ್ನು ಹವ್ಯಾಸವನ್ನಾಗಿ ಬೆಳೆಸಿಕೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳಿಗೆ ವಿಷಯಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಬಹುದು. ಮೌಲ್ಯಮಾಪನವು ಮಕ್ಕಳಿಗೆ ಅಷ್ಟೇ ಅಲ್ಲ, ಶಿಕ್ಷಕರ ಮೌಲ್ಯಮಾಪನವೂ ಹೌದು ಎಂದು ತಿಳಿಸಿದರು. ಮಧ್ಯಾಹ್ನದ ಭೋಜನದ ನಂತರವು ಶಶಿಧರ್ ಸಿಂಗ್‌ರವರು ಶಿಕ್ಷಕರಿಗೆ ಲಿಂಗ, ವಚನ, ಸಮಾಸ, 5ಇಗಳ ಬಗ್ಗೆ ಸವಿಸ್ತಾರವಾದ ಮಾಹಿತಿ ನೀಡಿದರು. ನಂತರ ಪುಂಡಲೀಕ್ ಎಸ್. ಜಗದಲೆ ಮತ್ತು ಶ್ರೀಮತಿ ತ್ರಿವೇಣಿ ಶಿಕ್ಷಕರು ನಾವು ಅನೇಕ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದೇವೆ, ಆದರೆ ಇಂತಹ ಅತ್ಯುತ್ತಮ ಕಾರ್ಯಾಗಾರ ಆಯೋಜನೆ ಕಷ್ಟ. ನಮಗೆ ಇಲ್ಲಿ ಆಗಮಿಸಿರುವುದರಿಂದ ವಿಷಯದ ಬಗ್ಗೆ ಅನೇಕ ಹೊಸ ಮಾಹಿತಿಗಳು ಸಿಕ್ಕಂತಾಗಿದೆ ಎಂದು ತಮ್ಮ ಅನಿಸಿಕೆಯನ್ನೇಳಿದರು. ನಂತರ ಸಂಪನ್ಮೂಲ ವ್ಯಕ್ತಿಗಳಾದ ಶಶಿಧರ್ ಸಿಂಗ್‌ರವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ನಂತರದ ಅವಧಿಯಲ್ಲಿ ರಾಜ್ಯದ ಅನೇಕ ಜಿಲ್ಲೆಗಳಿಂದ ಆಗಮಿಸಿದ ಹಿಂದಿ ಶಿಕ್ಷಕರು ತಮ್ಮ ವೃತ್ತಿ ಸಮಸ್ಯೆಗಳನ್ನು ಸಂಘದ ಹಿರಿಯರಿಗೆ ತಿಳಿಸಿದರಲ್ಲದೇ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮಹತ್ತರ ಪಾತ್ರ ವಹಿಸಬೇಕೆಂದು ವಿನಂತಿಸಿಕೊಂಡರು. ಸಂಘದ ಹಿರಿಯರು ಆ ಶಿಕ್ಷಕರಿಗೆ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಲಾಗುತ್ತದೆ ಎಂಬ ಭರವಸೆಯನ್ನು ನೀಡಿದರು.

ಸಂಘದ ಮಾರ್ಗದರ್ಶಕರೂ ಹಾಗೂ ಹಿರಿಯರು ಆದ ಶ್ರೀ ಹೆಚ್. ನಾಗಭೂಷಣ್‌ರವರು ಶಿಕ್ಷಕರು ಪಾಠವಷ್ಟೇ ಅಲ್ಲ, ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಮತ್ತು ಉತ್ತಮ ಮೌಲ್ಯಗಳನ್ನು ಮಕ್ಕಳಲ್ಲಿ ಬಿತ್ತುವ ಕೆಲಸವನ್ನು ಶಿಕ್ಷಕರು ಮಾಡಬೇಕು ಎಂದು ಹೇಳಿದರು. ಸುಮಾರು 14 ಜಿಲ್ಲೆಗಳಿಂದ ಹಿಂದಿ ಬೋಧನಾ ವಿಷಯದಲ್ಲಿ ಆಸಕ್ತ ಹಾಗೂ ಸಕ್ರಿಯ 50 ಹಿಂದಿ ಶಿಕ್ಷಕರು ಈ ಕಾರ್ಯಾಗಾರದಲ್ಲಿ ಭಾಗವಹಿಸುವುದರ ಮೂಲಕ ಹಿಂದಿ ವಿಷಯ ಶಿಕ್ಷಕರ ರಾಜ್ಯಮಟ್ಟದ ಕಾರ್ಯಾಗಾರವನ್ನು ಯಶಸ್ವಿಗೊಳಿಸಿದರು.

●

# ಸಶಸ್ತ್ರಕ್ರಾಂತಿಯ ಪೀಠಿಕೆ – ಬರೆದಿತ್ತವನು ಫಡಕೆ

**ಭೀಮಸೇನ್ ಪುರೋಹಿತ್**
**ಡಾಟಾ ಸೈಂಟಿಸ್ಟ್**
**ಬೆಂಗಳೂರು**



ಆಗ ತಾನೆ, ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಭೀಕರತೆಯಿಂದ ಸುಧಾರಿಸಿಕೊಳ್ಳುತ್ತಿದ್ದ ಬ್ರಿಟಿಷರಿಗೆ, ಅದರಷ್ಟೇ ಪ್ರಖರ ಭಯವನ್ನು ಒಬ್ಬನೇ ವ್ಯಕ್ತಿ ಮತ್ತೊಮ್ಮೆ ಹುಟ್ಟಿಸಿದ್ದ. ಅವನ ಹೆಸರು "ವಾಸುದೇವ ಬಲವಂತ ಫಡ್ಕೆ". ಮಹಾರಾಷ್ಟ್ರದ ಶಿರ್ಧೋಣ್ ನಲ್ಲಿ ಜನನ. 1857 ಸಂಗ್ರಾಮ ನಡೆದಾಗ, ಆತ ಹೈಸ್ಕೂಲ್ ಓದುತ್ತಿದ್ದ. ಅದರಿಂದ ಪ್ರೇರಿತಗೊಂಡ ಫಡ್ಕೆ ಅರ್ಧಕ್ಕೆ ಶಾಲೆಗೆ ನಮಸ್ಕಾರ ಹೇಳಿದ. 1860 ರಲ್ಲಿಯೇ ಅವನ ಮದುವೆಯೂ ಆಯಿತು. ಇಷ್ಟ ಇಲ್ಲದಿದ್ದರೂ ಸಂಸಾರದ ನಿರ್ವಹಣೆಗೆ ಒಂದು ವೈದ್ಯಕೀಯ ಕಾಲೇಜಿನಲ್ಲಿ ನೌಕರಿ ಸೇರಿದ. ಅದೊಮ್ಮೆ ಅವನ ತಾಯಿ ತೀರಾ ಅಸ್ವಸ್ಥರಾದ ಸಂದೇಶ ಬಂತು. ಕೂಡಲೇ ರಜೆಗೆ ಅರ್ಜಿ ಹಾಕಿದರೂ ಅನುಮತಿ ಸಿಗಲಿಲ್ಲ. ಆದರೂ ಲೆಕ್ಕಿಸದೆ ಊರಿಗೆ ಹೋದಾಗ ಅವನ ತಾಯಿ ಅದಾಗಲೇ ಸ್ವರ್ಗಸ್ಥರಾಗಿದ್ದರು. ಇದರಿಂದ ಆಕ್ರೋಶಗೊಂಡ ಫಡ್ಕೆ ಕೆಲಸಕ್ಕೆ ರಾಜೀನಾಮೆ ನೀಡಿದ.

ನಿಜವಾಗಿ ಇತಿಹಾಸ ಗಮನಿಸೋದಾದ್ರೆ, ಈ "ಸ್ವದೇಶೀ" ಚಳುವಳಿಯನ್ನು ಮನೆಮನೆಗೂ ಕೊಂಡೊಯ್ದ ಮೊದಲಿಗ ಅಂದ್ರೆ ಈ ಫಡಕೆಯೇ. ಜಸ್ಟಿಸ್ ಮಹದೇವ್ ಗೋವಿಂದ್ ರಾನಡೆಯವರ ಸ್ವದೇಶೀ ವಿಚಾರಗಳಿಂದ ಸ್ಫೂರ್ತಿ ಪಡೆದ ಫಡ್ಕೆ, ಗಲ್ಲಿ ಗಲ್ಲಿಗಳಿಗೂ ಹೋಗಿ, ಸ್ವದೇಶಿತನದ ಮಹತ್ವದ ಬಗ್ಗೆ ಉಪನ್ಯಾಸ ನೀಡುತ್ತಿದ್ದ. ಆದರೆ, ಜನರಲ್ಲಿ ಅಂತಸ್ಸತ್ವ ಕಳೆದುಹೋಗಿತ್ತು. ಕೇವಲ ಭಾಷಣಗಳಿಂದ ಸ್ವಾತಂತ್ರ್ಯ ಸಾಧ್ಯವಿಲ್ಲ ಎಂದು ಬೇಗನೆ ಅರ್ಥವಾಯಿತು.. ಅಲ್ಲದೆ ಯುವಕರಿಗೆ ರಾಷ್ಟ್ರೀಯ ಶಿಕ್ಷಣ ಅವಶ್ಯಕ ಎಂಬ ದೃಷ್ಟಿಯಲ್ಲಿ ಶಿಕ್ಷಣ ಸಂಸ್ಥೆಯನ್ನೂ ತೆರೆದ. ಇದರ ಮಧ್ಯೆಯೇ, ಮಹಾರಾಷ್ಟ್ರದಲ್ಲಿ ಭೀಕರ ಕ್ಷಾಮ ತಲೆದೋರಿತು. ಜನ ಒಪ್ಪತ್ತು ತುತ್ತಿಗೂ ಗತಿಯಿಲ್ಲದೆ ಪರದಾಡು ವಂತಾಯಿತು. ಆದರೆ ಕ್ರೂರ ಬ್ರಿಟಿಶ್ ಸರ್ಕಾರ ಮಾತ್ರ, ಎಂದಿನಂತೆ ತೆರಿಗೆಯ ವಸೂಲಿಯನ್ನು ಮುಂದುವರೆಸಿತು.ಬ್ರಿಟಿಷರ ಈ ನೀಚಕೃತ್ಯಗಳಿಂದ ಕುಪಿತನಾದ ಫಡ್ಕೆ ಮುಂದೆ ಇಟ್ಟ ಹೆಜ್ಜೆಯೇ ಇತಿಹಾಸ.

ಮಹಾರಾಷ್ಟ್ರದ ಗುಡ್ಡಗಾಡಿನಲ್ಲಿ "ರಾಮೋಷಿ"ಎಂಬ ಜನಾಂಗ ವಾಸವಾಗಿತ್ತು. ಕಾಡಿನ ರಕ್ಷಣೆಯೇ ಅವರ ಕಾಯಕ. ಆದರೆ ಆಂಗ್ಲರು ಕಾಡನ್ನು ನಾಶಗೊಳಿಸಿದಾಗ, ಸಹಜವಾಗಿಯೇ ಆ ಜನರಲ್ಲಿ ಬ್ರಿಟಿಷರ ವಿರುದ್ಧ ಒಂದು ದ್ವೇಷ ಮನೆಮಾಡ್ತು. ಫಡ್ಕೆಗೆ ಬೇಕಾಗಿದ್ದೂ ಇದೆ. ಅದೇ ರಾಮೋಷಿ ಜನರನ್ನು ಗುಂಪುಮಾಡಿ, ಅವರೆಲ್ಲರಿಗೂ ಶಸ್ತ್ರಗಳ ತರಬೇತಿ ಕೊಟ್ಟ. ಗೆರಿಲ್ಲಾ ಯುದ್ಧತಂತ್ರಗಳನ್ನು ಕಲಿಸಿದ. ಅಲ್ಲೊಂದು ದೊಡ್ಡ ಸೈನ್ಯವೇ ತಯಾರುಗೊಂಡಿತ್ತು. ಕೊನೆಗೆ 23 ಫೆಬ್ರುವರಿ 1879 ರಲ್ಲಿ, 'ಧಮರಿ'ಗ್ರಾಮದಲ್ಲಿ ತನ್ನ ಬಂಡಾಯದ ಬಾವುಟವನ್ನು ಏರಿಸಿಯೇ ಬಿಟ್ಟ. ಮೊದಮೊದಲಿಗೆ, ಫಡ್ಕೆ ನಡೆಸಿದ್ದು, ಆಂಗ್ಲರನ್ನು ಓಲೈಸುತ್ತಿದ್ದ ಶ್ರೀಮಂತರ ಮನೆಗಳ ಮೇಲೆ ದಾಳಿ. ಅಲ್ಲಿ ಸಿಕ್ಕ ಹಣವನ್ನು, ಶಸ್ತ್ರಗಳನ್ನೂ ಸಂಘಟನೆಯ ಬಲವರ್ಧನೆಗೆ ಬಳಸುತ್ತಿದ್ದ. ಹೀಗೆ ಮುಂದಿನ 4–5 ವರ್ಷಗಳ ವರೆಗೂ ಆಂಗ್ಲರ ವಿರುದ್ಧದ ಹೋರಾಟಗಳು ನಿರಂತರ ನಡೆದವು. ಫಡ್ಕೆ ಆಂಗ್ಲರಿಗೆ ಅಕ್ಷರಶಃ "ಸಿಂಹಸ್ವಪ್ನ"ವಾಗಿದ್ದ. ಬ್ರಿಟಿಶ್ ಸರ್ಕಾರ ಫಡಕೆಯನ್ನು ಬಂಧಿಸಲು ಮೇಜರ್ ಡೇನಿಯಲ್ ನ ಮುಂದಾಳತ್ವದಲ್ಲಿ ಒಂದು ಪಡೆ ರಚನೆ ಮಾಡಿತು. ಅದರ ವಾಸನೆ ಬಡಿದ ಕೂಡಲೇ, ಫಡ್ಕೆ ಭೂಗತನಾದ. ಬ್ರಿಟಿಷರ ಎಲ್ಲ ಪ್ರಯತ್ನ ವ್ಯರ್ಥವಾಯಿತು. ಆದರೆ ದೇಶದ ದೌರ್ಭಾಗ್ಯವೆಂಬಂತೆ, ಅದೊಮ್ಮೆ ಅತೀವ ಜ್ವರದಿಂದ ಬಳಲಿ, ಕದಲಗಿ ಎಂಬಲ್ಲಿ ಮರೆಸಿಕೊಂಡಿದ್ದಾಗ, ಬ್ರಿಟಿಷರ ಸೆರೆಯಾದ. ಅಲ್ಲಿಂದ ಆತನ ಬದುಕು ಯಾತನಾಮಯ.

ನೆಪಕ್ಕೆಂದು ವಿಚಾರಣೆ ನಡೆಸಿದ ಕೋರ್ಟ್, ಆಂಗ್ಲರ ವಿರುದ್ಧ ಬಂಡೆದ್ದ ಕಾರಣಕ್ಕೆ ಶಿಕ್ಷೆ ವಿಧಿಸಲಾಯಿತು. ಅದೂ ಎಲ್ಲಿಗೆ, ದೂರದ ಅರಬ್ ನ ಏಡನ್ನಿನ ಸೆರೆಮನೆ. ಭಾರತದ ಯಾವುದೋ ಸೆರೆಮನೆಯಲ್ಲಿ ಇಡಬಹುದಾಗಿತ್ತಾದರೂ, ಅವನನ್ನು ಏಡನ್ನಿಗೆ ಸಾಗುಹಾಕಲಾಯಿತು. ಯಾಕಂದ್ರೆ ಆಂಗ್ಲರಿಗೂ ಗೊತ್ತಾಗಿತ್ತು. ಈ ಭೂಪ, ದೇಶದ ಯಾವ ಮೂಲೆಯಲ್ಲಿದ್ದರೂ ಮತ್ತೆ ಭುಗಿಲೆದ್ದು ಬರುವ ಜ್ವಾಲಾಮುಖಿ ಅಂತ. ಫಡ್ಕೆ ಅತೀಭಾವುಕನಾಗಿ, ತನ್ನ ತಾಯ್ನಾಡನ್ನು ತೊರೆದು ಹೊರಟ. ಏಡನ್ – ಅದೊಂದು ಮೃತ್ಯುಕೂಪ. ತಿನ್ನಲು ಅರೆಬೆಂದ ಆಹಾರ, ಕುಡಿಯಲು ಹೊಲಸು ನೀರು, ಅದೂ ಚರ್ಮದ ಚೀಲದಲ್ಲಿ. ಇಂತಹ ದಿನನಿತ್ಯದ ಕಷ್ಟಗಳಿಂದ ಫಡ್ಕೆ ನೊಂದಿದ್ದರೂ, ಅವನ ದೇಶಭಕ್ತಿಗೆ ಕಿಂಚಿತ್ತೂ ಧಕ್ಕೆ ಆಗಿರಲಿಲ್ಲ. ತನ್ನ ದೇಶಕ್ಕೆ ಮತ್ತೆ ಹೋಗಬೇಕೆಂಬ ವಾಂಛೆ ಸದಾ ಅವನಲ್ಲಿತ್ತು. ಭಾರತವನ್ನು ಸ್ವಾತಂತ್ರಗೊಳಿಸಬೇಕು ಅನ್ನೋದೊಂದೇ ಅವನಲ್ಲಿದ್ದ ತುಡಿತ. ಹೇಗಾದರೂ ಜೈಲಿನಿಂದ ತಪ್ಪಿಸಿಕೊಳ್ಳಬೇಕೆಂದು ಯಾವಾಗಲೂ ಚಿಂತಿಸುತ್ತಿದ್ದ. ಹಾಗೆ ಯೋಚಿಸಿ ಒಮ್ಮೆ, ಜೈಲಿನ ಬಾಗಿಲನ್ನೇ ಮುರಿದು, ಅದನೆ ಏಣಿಯಂತೆ ಏರಿ, ಜೈಲಿನಿಂದ ತಪ್ಪಿಸಿಕೊಂಡುಬಿಟ್ಟ. ಆದರೆ ಹೋಗೋದಾದ್ರೂ ಎಲ್ಲಿಗೆ.? ಸುತ್ತಲೂ ಮರುಳುಗಾಡು. ಜನ–ಭಾಷೆ–ದಾರಿ ಯಾವುದೂ ಗೊತ್ತಿಲ್ಲ.. ಆದರೂ ನಿರಂತರ ಓಡಿದ. ಕೊನೆಗೆ ಸುಸ್ತಾಗಿ ಮೂರ್ಚೆತಪ್ಪಿ ಬಿದ್ದ.. ಅಲ್ಲಿನ ಕೆಲವರು ಅವನನ್ನು ಹಿಡಿದು ಮತ್ತೆ ಆಂಗ್ಲರಿಗೆ ಒಪ್ಪಿಸಿದರು.ಅಂದಿನಿದ ಅವನ ಮೇಲಿನ ನಿಗಾ ತೀವ್ರವಾಯಿತು.ಇನ್ನೂ ಹೆಚ್ಚಿನ ಕ್ರೂರತನವನ್ನು ತೋರಲಾರಂಭಿಸಿದರು.

ಭಾರತಮಾತೆಗಾಗಿ, ಅವಳ ಸ್ವಾತಂತ್ರಕ್ಕಾಗಿ ಇದೆಲ್ಲವೂ ಕರ್ತವ್ಯವೇ ಎಂದು ಎಲ್ಲವನ್ನೂ ಸಹಿಸಿಕೊಂಡ. ಆದರೆ, ಅಷ್ಟರಲ್ಲೇ ಅವನಿಗೆ ಕ್ಷಯ ರೋಗ ತಗುಲಿತು. ಆ ರೋಗದ ನಿರಂತರ ನರುಳುವಿಕೆಯಲ್ಲೇ ಫಡ್ಕೆ, ಫೆಬ್ರುವರಿ 17 1883 ರಂದು ಹುತಾತ್ಮನಾದ. ಅವನು ಸಾಯುವಾಗಲೂ ಅವನ ಕೈಯಲ್ಲೊಂದು ಗಂಟಿತ್ತು. ಅದರಲ್ಲಿ "ಪುಣ್ಯ ಭಾರತ"ದ ಮಣ್ಣು ಇತ್ತು. ಭಾರತದಿಂದ ಹೊರಡುವಾಗ ಅದನ್ನ ತುಂಬಿಕೊಂಡು ಬಂದಿದ್ದ ಆ ಭೂಪ. ತಮ್ಮದೆಲ್ಲವನ್ನೂ ನಾಡಿಗೆ ಅರ್ಪಿಸಿದ ಇಂತಹ ಮಹಾನೀಯರಿಂದಲೇ, ಇವತ್ತು ನಾವು ಸ್ವಾತಂತ್ರ್ಯದ ಸವಿಯನ್ನು ಅನುಭವಿಸುತ್ತಿದ್ದೇವೆ. ಅವನ ದಿವ್ಯಚೇತನಕ್ಕೆ ವಂದಿಸುತ್ತಾ, ಇನ್ನಷ್ಟು ಅಂತಹ ಸಿಂಹಗಳು ಭಾರತಗರ್ಭದಲ್ಲಿ ಜನ್ಮಿಸಲಿ ಎಂಬ ಹಾರೈಕೆಯೊಂದಿಗೆ. ವಂದೇ ಮಾತರಂ. ●

➢ ಪುಟ 4 ರಿಂದ..... ಬಂತು ಚುನಾವಣೆ...

ಪರಸ್ಪರರಲ್ಲಿ ಅಪನಂಬಿಕೆ, ಅಧಿಕಾರದ ಹಂಚಿಕೆಯಲ್ಲಿ ಅಪಸ್ವರ ಸ್ವಾರ್ಥಸಾಧನೆಗೆ ತೀವ್ರ ಗಮನ. ಹೀಗೆ ರಾಷ್ಟ್ರಹಿತ ಸಾಧನೆಯಾಗುವುದು ತೀರ ಕಷ್ಟದಾಯಕ. ನಮ್ಮ ಆಯ್ಕೆಗೆ ಇನ್ನುಳಿದುದು ಎರಡು ರಾಷ್ಟ್ರೀಯ ಪಕ್ಷಗಳು. ಕಾಂಗ್ರೆಸ್ ಹಾಗೂ ಬಿ. ಜೆ. ಪಿ. ಈಗಿರುವ ಪ್ರಶ್ನೆ ಯಾರು ಹಿತರವರು ನಮಗೆ ಈ ಇಬ್ಬರೊಳಗೆ? ಒಬ್ಬರಂತೂ ಈ ದೇಶವನ್ನು 50 ವರ್ಷಗಳಿಗೂ ಮೀರಿ ಆಳಿದವರು. ಮುತ್ತಾತ, ಅಜ್ಜಿ, ಅಪ್ಪ, ಅಮ್ಮ ಈಗ ಕೊನೆಯ ಕುಡಿಯ ಕಾಲ. ಅಜ್ಜಿಯ 'ಗರೀಬಿ ಹಟಾವೋ' ಕೂಗನ್ನು ಮೊಮ್ಮಗಳು, ಮೊಮ್ಮಗ ಮುಂದುವರೆಸುತ್ತಿದ್ದಾರೆ. ಅವರದ್ದೆಲ್ಲಾ ಗರೀಬೀ ಹಟಾವ್ ಆಗಿದೆ ಎಂಬುದು ಎಲ್ಲರಿಗೂ ಅರ್ಥವಾಗಿದೆ!

ಅವರ 50–55 ವರ್ಷಗಳಲ್ಲಿ ಅದೆಷ್ಟು ಹಗರಣಗಳು? ಮುಂದ್ರಾ ಬ್ಯಾಂಕ್ ಹಗರಣ, ಬೋಫೋರ್ಸ್‌ಗನ್ ಹಗರಣ, 2 ಜಿ, 3ಜಿ ಇನ್ನೆಷ್ಟೋ ಜಿ ಗಳು, ಕಲ್ಲಿದ್ದಿಲಿನಿಂದ ಮಸಿಬಳಿದುಕೊಂಡ ಹಗರಣ. ಒಟ್ಟಾರೆ ಹಗರಣಗಳ ಸರಮಾಲೆ!

ಇನ್ನುಳಿದೊಂದು ರಾಷ್ಟ್ರೀಯ ಪಕ್ಷ ಆಳಿದ್ದೇ ಕಡಿಮೆ ಸಮಯ. ಒಂದಾದರೂ ಹಗರಣ ಇಲ್ಲ. ನಾನು ಭಾರತೀಯ ಎಂದು ಎದೆ ಎತ್ತಿ ಹೆಮ್ಮೆಯಿಂದ ನಮ್ಮ ಎನ್ ಆರ್ ಐ ಅನಿವಾಸೀ ಭಾರತೀಯರೂ ಹೇಳಿಕೊಳ್ಳುವಷ್ಟು ಆಡಳಿತದ ಅದರ ನಾಯಕತ್ವದ ಸಾಧನೆ.

ಇನ್ನು ಪ್ರಧಾನಮಂತ್ರಿ–ದೇಶವನ್ನು ಮುನ್ನಡೆಸಬೇಕಾದ ನಾಯಕರ ಆಕಾಂಕ್ಷೆಗಳನ್ನು ಗಮನಿಸಿ.

ಒಬ್ಬಾತ ಬಡತನವನ್ನೇ ಉಂಡು ಹಾಸಿ ಹೊದ್ದವನು. ಮತ್ತೊಬ್ಬ Born with a silver spoon! ಒಬ್ಬನಿಗೆ Nation First. ಮತ್ತೊಬ್ಬನಿಗೆ Family First. ಒಬ್ಬ ದೇಶದೋನ್ನತಿಯ ಕನಸುಗಾರ. ಮತ್ತೊಬ್ಬ ಹಗಲು ಕನಸು ಕಾಣುವವನು. ಒಬ್ಬನ ನೆಂಟರಿಷ್ಟರು ಇಂದಿಗೂ ಕಡುಬಡವರು. ಮತ್ತೊಬ್ಬನ ಸಂಬಂಧಿಕ ಕೋರ್ಟಿಗೆ ಅಲೆದಾಡುತ್ತಿರುವ ಕರೋಡ್‌ಪತಿ. ಒಬ್ಬನ ಸುತ್ತ ಜನಸಾಗರ, ಮತ್ತೊಬ್ಬನ ಸುತ್ತ ಪಂಚರಂಗಿಗಳು. ಒಬ್ಬ ಬಾಯಿಬಿಟ್ಟರೆ ಪ್ರೇರಣಾಸ್ರೋತ. ಮತ್ತೊಬ್ಬ ಬಾಯಿ ಬಿಟ್ಟರೆ ಬಣ್ಣಗೇಡು.

ಈಗ ನೀವೇ ಯೋಚಿಸಿ ಯಾರು ನಿಮಗೆ, ನಿಮ್ಮ ದೇಶಕ್ಕೆ ಹಿತ. ಯೋಚಿಸುತ್ತಾ ಕೂರುವ ಕಾಲ ಇದಲ್ಲ. ವಿವೇಕಾನಂದರ ಏಳಿ, ಎದ್ದೇಳಿ ಎಂಬ ಕಾಲನ ಕರೆಗೆ ಓಗೊಟ್ಟು ಕಣಕ್ಕಿಳಿದು ಕೆಲಸ ಮಾಡುವ ಕಾಲ. ನಾವಿತ್ತ ಓಟು ಸಾರ್ಥಕವಾಗಬೇಕಾದರೆ ನಮ್ಮಂತೆ ಯೋಚಿಸಿ, ನಾವು ಮತನೀಡುವವರಿಗೇ ಮತನೀಡುವಂತೆ, ಜನರನ್ನು ಪ್ರೇರೇಪಿಸಬೇಕು. ಈ ಮಾತು ಒಬ್ಬರಿಂದೊಬ್ಬರಿಗೆ ಹರಡಿ ನಾವು ಮತನೀಡಿದವರೇ ಗದ್ದುಗೆ ಏರಬೇಕು. ಆಗ ಮಾತ್ರ ನಮ್ಮ ಮತ ಸಾರ್ಥಕ, ನಮ್ಮ ಹಿತ ಅಬಾಧಿತ.

●

➢ ಪುಟ 6 ರಿಂದ..... ಮತದಾನದಲ್ಲಿ ಮಹಿಳೆಯ ಪಾತ್ರ...

ಮತದಾನದ ಹಕ್ಕನ್ನು ಪಡೆಯಬಹುದೆಂದೂ ಆದರೆ ಆಕೆ ಆಸ್ತಿ ಮತ್ತು ಶಿಕ್ಷಣವನ್ನು ಹೊಂದಿರಬೇಕೆಂದಾಯಿತು. ಆಡಳಿತದಲ್ಲಿ ಕೂಡ ಆಕೆ ಪಾಲ್ಗೊಳ್ಳಬಹುದೆಂದಾಯಿತು.

1926ರಲ್ಲಿ ಮೊಟ್ಟಮೊದಲಿಗೆ ಕಮಲಾದೇವಿ ಚಟ್ಟೋಪಾಧ್ಯಾಯ ಮಂಗಳೂರಿನಿಂದ ಮದರಾಸು ಅಸೆಂಬ್ಲಿಯ ಚುನಾವಣೆಗೆ ಸ್ಪರ್ಧಿಸಿದರೂ ಅತಿ ಕಡಿಮೆ ಅಂತರದಲ್ಲಿ ಪರಾಜಯಗೊಂಡರು. ಡಾ॥ ಮುತ್ತುಲಕ್ಷ್ಮಿರೆಡ್ಡಿ ಎಂಬ ಮಹಿಳೆ 1927 ರಲ್ಲಿ ಮದರಾಸು ಅಸೆಂಬ್ಲಿಗೆ ಚುನಾಯಿತರಾದ ಮೊಟ್ಟಮೊದಲ ಮಹಿಳಾ ಕೌನ್ಸಿಲರ್ ಎಂಬ ಹಿರಿಮೆಯನ್ನು ಪಡೆದುಕೊಂಡರು. ಈ ಎಲ್ಲ ಹಂತಗಳ ಬೆಳವಣಿಗೆಯೊಂದಿಗೆ ಸ್ವತಂತ್ರ ಭಾರತದಲ್ಲಿ ಎಲ್ಲ ವಯಸ್ಕ ಮಹಿಳೆಯರು ಮತದಾನದ ಹಕ್ಕನ್ನು ಪಡೆದುಕೊಂಡರು. 1988 ರ ಡಿಸೆಂಬರ್15ರಂದು ಲೋಕಸಭೆಯಲ್ಲಿ ಮತದಾನದ ವಯಸ್ಸನ್ನು 21ರಿಂದ 18ಕ್ಕೆ ಇಳಿಸಬೇಕೆಂಬ ನಿರ್ಧಾರವನ್ನು ಕೈಗೊಳ್ಳಲಾಯಿತು.

ಪ್ರಜಾಪ್ರಭುತ್ವ ಆಡಳಿತ ಪದ್ಧತಿಯಲ್ಲಿ ದೇಶದ ಅಭ್ಯುದಯದ ಕಾರ್ಯದಲ್ಲಿ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಕಡ್ಡಾಯವಾಗಿರುವುದರಿಂದ, ಆಡಳಿತದ ಚುಕ್ಕಾಣಿ ಹಿಡಿಯುವ ಸೂಕ್ತ ನಾಯಕರನ್ನು ಆಯ್ಕೆ ಮಾಡುವ ಜವಾಬ್ದಾರಿ ತುಂಬ ಮಹತ್ತ್ವದ್ದಾಗಿರುತ್ತದೆ. ಇದರೊಂದಿಗೆ ವೈಯಕ್ತಿಕ ಸಮಸ್ಯೆಗಳನ್ನು ಕುರಿತು ಚಿಂತನೆ ನಡೆಸುವುದು, ಅವುಗಳ ಪರಿಹಾರಕ್ಕಾಗಿ ಆಡಳಿತ ನಡೆಸುವವರಲ್ಲಿ ಪ್ರಸ್ತಾಪಿಸುವುದು ಎರಡನೇ ಹಂತದ ಕಾರ್ಯವಾಗಿರುತ್ತದೆ. ಹಾಗೆಯೇ ಮಹಿಳೆ ಕೂಡ ಮತದಾನವೆಂಬ ತನ್ನ ಹಕ್ಕನ್ನು ಚಲಾಯಿಸುವಾಗ ತಾನು ಆರಿಸುವ ಅಭ್ಯರ್ಥಿ ದೇಶಕ್ಕೆ ನಂತರ ತನ್ನ ಸಮಾಜಕ್ಕೆ ಅಗತ್ಯವಾದ ಅಭಿವೃದ್ಧಿಪರ ಕಾರ್ಯಗಳನ್ನು ಮಾಡುವ ಅರ್ಹತೆ ಹೊಂದಿರುತ್ತಾರೆಯೇ ಎಂಬುದನ್ನು ವಿವರವಾಗಿ ಪರಿಶೀಲಿಸಿ ನಿರ್ಧಾರವನ್ನು ಕೈಗೊಳ್ಳಬೇಕಾಗುತ್ತದೆ. ಮಹಿಳೆಯಾಗಿ ಮಹಿಳೆಯರ ಸಮಸ್ಯೆಗಳನ್ನಾಗಲೀ, ಅಧಿಕಾರಗಳನ್ನಾಗಲೀ, ಬೇಡಿಕೆಗಳನ್ನಾಗಲೀ ಕುರಿತು ಚಿಂತಿಸುವ, ಒತ್ತಾಯಿಸುವ ಶಕ್ತಿ ಆಕೆಗೆ ಮಾತ್ರವೇ ಇರುತ್ತದೆ.

ರಾಜಕೀಯ ಪ್ರವೇಶ ಮಾಡುವ ಮಹಿಳೆಯರಲ್ಲಿ ಕೂಡ ಹಲವು ಸಮಸ್ಯೆಗಳನ್ನು ಪುರುಷರಿಗಿಂತ ಭಿನ್ನವಾಗಿ ಆಲೋಚಿಸುವ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಯೋಗ್ಯ ಅಭಿಪ್ರಾಯಗಳನ್ನು, ಸಲಹೆಗಳನ್ನು ಸೂಚಿಸುವ ಬೌದ್ಧಿಕ ಸಾಮರ್ಥ್ಯವಿರುವುದು ನಿರೂಪಿತವಾಗಿದೆ. ಯಾವುದೇ ಸಮಸ್ಯೆಯ ಬಗೆಗೆ ಚಿಂತಿಸುವಾಗ ಅಗತ್ಯವಾದ ತಾಳ್ಮೆ ಕೆಲವು ಸಂದರ್ಭಗಳಲ್ಲಿ ಅತ್ಯವಶ್ಯಕವಾಗಿರುತ್ತದೆ. ಅಂತಹ ಸನ್ನಿವೇಶಗಳಲ್ಲಿ ತನ್ನ ಸಹನೆಯ, ವಿವೇಚನೆಯ ಮೂಲಕ ಸಮಸ್ಯೆಯ ಜಟಿಲತೆಯನ್ನು ಬಿಡಿಸಿರುವ ಅದೆಷ್ಟೋ ಉದಾಹರಣೆಗಳನ್ನೂ ಕೇಳುತ್ತೇವೆ. ಮಹಿಳೆಯ ರಾಜಕೀಯ ಪ್ರವೇಶ, ಆಡಳಿತ ಕಾರ್ಯದಲ್ಲಿ ಪಾಲ್ಗೊಳ್ಳುವಿಕೆ ಎಲ್ಲವೂ ಆಕೆಯ ಸಾಮರ್ಥ್ಯವನ್ನು ಬೆಳಕಿಗೆ ತರುವಲ್ಲಿ ಸಹಕಾರಿಯಾಗುತ್ತದೆ. ಮತದಾನದ ಪ್ರಕ್ರಿಯೆಯಲ್ಲಿ ತೋರುವ ವಿವೇಚನೆ ಪರಿಣಾಮಕಾರಿಯಾಗಿ ಯಶಸ್ವೀ ಬೆಳವಣಿಗೆಯೊಂದಿಗೆ, ಸಾಮಾಜಿಕ ವ್ಯವಸ್ಥೆಯ ಆರೋಗ್ಯಕರ ಪ್ರಗತಿಯ ಕಾರ್ಯದಲ್ಲಿ ಮುಂದುವರಿಯಲು ಸಹಕಾರಿಯಾಗುತ್ತದೆ.

●

**ಇಂದು ಮತದಾನ ಮಾಡುವುದು ಆದಲ್ಲಿ ಕಷ್ಟ, ಮುಂದೆ ಅನುಭವಿಸುವೆವು ಬಹುದೊಡ್ಡ ನಷ್ಟ**

# ಶಿಕ್ಷಕನಿಂದ ಗುರುವಿನೆಡೆಗೆ ಪಯಣ – ಶ್ರೀ ರಘುನಂದನ

**ಹುಬ್ಬಳ್ಳಿ:** ಇದು ಆಧುನಿಕ ಯುಗ. ಹಿಂದಿಗಿಂತಲೂ ಇಂದು ಹೆಚ್ಚು ಸವಾಲಾಗಿ ಸ್ವೀಕರಿಸಬೇಕಿದೆ. ಹೀಗಾಗಿ ಶಿಕ್ಷಕನಿಗೂ ಕೌಶಲ್ಯಪೂರ್ಣ ಚಿಂತನೆಗೆ ನೆರವು ಬೇಕಾಗುತ್ತದೆ. ಆ ಕಾರಣಕ್ಕಾಗಿ ಅಧ್ಯಯನ, ಅಧ್ಯಾಪನ, ಭವಿಷ್ಯದ ಚಿಂತನೆ, ದೇಶದ ಸಂಸ್ಕೃತಿಯ ಅರಿವು, ಮಾನವೀಯ ಮೌಲ್ಯಗಳ ಆಚರಣೆ ಹೀಗೆ ಅನೇಕ ರೀತಿಯಲ್ಲಿ ಶಿಕ್ಷಕ ಸಿದ್ಧನಾಗಬೇಕು ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ KRMSS ಮಹಾ ವಿದ್ಯಾಲಯಗಳ ಶಿಕ್ಷಕ ಸಂಘಗಳು ವಿಜಯನಗರ ಕಾಲೇಜಿನಲ್ಲಿ ಏರ್ಪಡಿಸಿದ್ದ "ಕರ್ತವ್ಯ ಬೋಧ ದಿವಸ"ದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರಜ್ಞಾ ಪ್ರವಾಹ ಸಂಘಟನೆಯ ದಕ್ಷಿಣ ಭಾರತದ ಸಂಯೋಜಕರಾದ ಶ್ರೀ ರಘುನಂದನ ಶಿಕ್ಷಕರನ್ನುದ್ದೇಶಿಸಿ ಮಾತನಾಡಿದರು.

ಶಿಕ್ಷಕರಿಗೆ ಇಂದು ಹಲವು ಒತ್ತಡಗಳಿವೆ. ವಿದ್ಯಾರ್ಥಿಗಳ, ಸಂಸ್ಥೆಯ, ಸರ್ಕಾರದ, ಪೋಷಕರ ಹಲವು ರೀತಿಯ ಮನೋಭಾವಗಳನ್ನು ಆತ ಅರಿತುಕೊಳ್ಳಬೇಕಿದೆ. ಆ ಮನೋಭಾವಗಳನ್ನು ಸಮಸ್ಯೆಗಳನ್ನಾಗಿ ಸ್ವೀಕರಿಸದೇ ಸವಾಲನ್ನು ಕಂಡು ಅದಕ್ಕೆ ಚಿಕಿತ್ಸೆ ನೀಡುವ ಮನೋವಿಜ್ಞಾನಿಯಾಗಿ, ದಾರ್ಶನಿಕನಾಗಿ ಆತ ಸಿದ್ಧನಾದರೆ ರಾಷ್ಟ್ರರಕ್ಷಕ, ರಾಷ್ಟ್ರ ಪ್ರವರ್ತಕನಾಗಿ ಆತ ಉತ್ತಮ ಸಮಾಜ ನಿರ್ಮಾಣಕ್ಕೆ ದಾಂಗುಡಿಯಿಡಬಹುದು. ಅತ್ಯುತ್ತಮ ವ್ಯಕ್ತಿತ್ವ ನಿರ್ಮಾಣದತ್ತ ಗಮನ ಹರಿಸುವುದರಿಂದ ಅತ್ಯುತ್ತಮ ಗುರುಪರಂಪರೆಗೆ ದಾಖಲಾಗಬಹುದು. ಇದರಿಂದ ಆರೋಗ್ಯಪೂರ್ಣ ಸಮಾಜ, ಸ್ವಾಭಿಮಾನ ಸಂಪನ್ನ ವ್ಯಕ್ತಿತ್ವ ನಿರ್ಮಾಣವಾಗಿ ಆದರ್ಶ ರಾಷ್ಟ್ರ ಕಟ್ಟುವಿಕೆಗೆ ತನ್ನ ಕೊಡುಗೆಯನ್ನು ಶಿಕ್ಷಕ ನೀಡುತ್ತಾನೆ.

ಶಿಕ್ಷಕರು ನುಡಿದದ್ದನ್ನು ಆಚರಣೆಗೆ ತಂದಾಗ ಆಚಾರ್ಯನಾಗುತ್ತಾನೆ. ತಾನು ತಿಳಿದುಕೊಂಡಿರುವ ವಿದ್ಯೆಯ ನಶಿಸಿ ಹೋಗಲು ಬಿಡದೆ, ಅದನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿಯನ್ನು ಹೊಂದಿರುತ್ತಾನೆ. ವಿದ್ಯಾರ್ಥಿಯನ್ನು ಚಿಂತನೆ ಮಾಡಲು ಪ್ರೇರೇಪಿಸುವುದು. ವಿದ್ಯಾರ್ಥಿಯನ್ನು ಆಂತರಿಕ ಪಯಣಕ್ಕೆ ಸಿದ್ಧ ಮಾಡುವುದು. ಅವರು ಮುಂದಿನ ಹಂತಕ್ಕೆ ತಲುಪಲು ಪ್ರೇರಣೆ ನೀಡುವುದು. ತನ್ನ ಮೇಲ್ಪಂಕ್ತಿ ವ್ಯಕ್ತಿತ್ವದ ಮೂಲಕ ಆದರ್ಶವಾಗುವುದು ಈ ರೀತಿಯ ಅನೇಕ ಮೌಲ್ಯಗಳನ್ನು ಶಿಕ್ಷಕರು ಅಳವಡಿಸಿಕೊಳ್ಳಬೇಕಿದೆ ಎಂದು ಹೇಳಿದರು.

KRMSS ರಾಜ್ಯ ಅಧ್ಯಕ್ಷರಾದ ಡಾ. ರಘು ಅಕಮಂಚಿ ಶಿಕ್ಷಕರಿಗೆ ಕರ್ತವ್ಯ ಬೋಧದ ಪ್ರತಿಜ್ಞೆಯನ್ನು ಬೋಧಿಸಿದರು. ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಅಧ್ಯಕ್ಷರಾದ ಸಂದೀಪ ಬೂದಿಹಾಳರವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಡಾ. ಜಿ. ಕೆ. ಬಡಿಗೇರ, ಡಾ. ಜಗದೀಶ ಬರಗಿ, ಡಾ. ಬಿ. ಎಸ್. ತಲ್ಲೂರ, ಡಾ. ವಾಯ್. ಎಮ್. ಭಜಂತ್ರಿ, ಡಾ. ಹೆಚ್. ವ್ಹಿ. ಬೆಳಗಲಿ, ಡಾ. ಲಿಂಗರಾಜ ಹೊರಕೇರಿ, ಡಾ. ಮಹೇಶ ಹೊರಕೇರಿ, ಅಭಿಷೇಕ ಕುಬಸದ, ಪುಂಡಲೀಕ ಕವಳಕಟ್ಟಿ, ಬಸವರಾಜ ದೇವರಮನಿ ಮತ್ತು ಶಿಕ್ಷಕರು ಉಪಸ್ಥಿತರಿದ್ದರು. •

## ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕರ್ತವ್ಯಬೋಧ ದಿವಸ್ ಆಚರಣೆ

**ಗುಲ್ಬರ್ಗ ಜಿಲ್ಲೆ 5 ಸ್ಥಳಗಳಲ್ಲಿ, ಬೆಳಗಾಂವ 4, ಧಾರವಾಡದ 4 ಕಡೆ, ತುಮಕೂರಿನ 2 ಕಡೆ, ಮೈಸೂರಿನ 2 ಕಡೆ ಹಾಗೂ ಬೆಂಗಳೂರಿನ 3 ಸ್ಥಳಗಳಲ್ಲಿ ಕರ್ತವ್ಯಬೋಧದಿವಸ್‌ನ್ನು ದಿನಾಂಕ 12.01.2019 ರಿಂದ 23.01.2019 ರವರೆಗೆ ಆಚರಿಸಲಾಯಿತು. ಒಟ್ಟು ರಾಜ್ಯದ 20 ಸ್ಥಳಗಳಲ್ಲಿ ಯಶಸ್ವಿಯಾಗಿ ಕರ್ತವ್ಯಬೋಧ ದಿವಸ್ ಆಚರಿಸಲಾಯಿತು.**

## ನುಡಿಮುತ್ತು

- ಒಮ್ಮೆ ಅವನ ಪವಿತ್ರನಾಮದ ಶಕ್ತಿಯಲ್ಲಿ ನಂಬಿಕೆ ಹುಟ್ಟಿ ಅದನ್ನು ಪದೇ ಪದೇ ಉಚ್ಚರಿಸುವುದಕ್ಕೆ ಮನಸ್ಸಾದ ಮೇಲೆ ಭಕ್ತಿ, ವಿವೇಕ, ಸಾಧನೆಗಳಾವುವೂ ಅವಶ್ಯಕವಿಲ್ಲ. ಸಂಶಯ ಮಾಯವಾಗುವುದು. ಅವನ ನಾಮದ ಬಲದಿಂದ ದೇವರನ್ನೇ ಹೊಂದುವನು.
  – ಶ್ರೀರಾಮಕೃಷ್ಣರು
- ಮನಸ್ಸು ಏಕಾಗ್ರವಾಗದಿದ್ದರೂ ಪವಿತ್ರ ನಾಮ ಜಪವನ್ನು ಮಾತ್ರ ಬಿಡಬೇಡ. ನಿನ್ನ ಕರ್ತವ್ಯವನ್ನು ನೀನು ಮಾಡು. ನಾಮ ಜಪ ಮಾಡುವಾಗ ಮನಸ್ಸು ಗಾಳಿಯಿಲ್ಲದ ಪ್ರದೇಶದಲ್ಲಿಟ್ಟ ದೀಪದಂತೆ ಅಲುಗಾಡದೆ ಸ್ಥಿರವಾಗಿರುವುದು. ದೀಪ ಅಲುಗಾಡುವಂತೆ ಮಾಡುವುದು ಗಾಳಿ. ಅದೇ ರೀತಿ ನಮ್ಮ ಬಯಕೆ, ವಾಸನೆಗಳು ಮನಸ್ಸನ್ನು ಚಂಚಲಗೊಳಿಸುವುವು. – ಶ್ರೀಮಾತೆ ಶಾರದಾದೇವಿ
- ನಾವು ಸ್ವತಃ ಪರಿಶುದ್ಧರಾಗಿರುವುದು, ಇತರರಿಗೆ ಒಳ್ಳೆಯದನ್ನು ಮಾಡುವುದು, ಇದು ಎಲ್ಲ ಪೂಜೆಯ ಸಾರ. ಯಾರು ದೀನರಲ್ಲಿ, ದುರ್ಬಲರಲ್ಲಿ, ರೋಗಿಗಳಲ್ಲಿ ಶಿವನನ್ನು ನೋಡುವರೋ ಅವರೇ ನಿಜವಾಗಿ ಶಿವನನ್ನು ಪೂಜಿಸುವವರು.
  – ಸ್ವಾಮಿ ವಿವೇಕಾನಂದ

# ಚಿತ್ರಸುದ್ದಿ | ರಾಜ್ಯದ ವಿವಿಧೆಡೆ ಕರ್ತವ್ಯಬೋಧ ದಿವಸ್ ಆಚರಣೆ












MAG(3)/NPP/26/2018-19 Registered No. RNI 45459/85
Date of Publishing : 17-02-2019

Posted at Bangalore PSO Bangalore -560 026
Date of Posting 20h or 21st of every month

## ಹಿಂದಿ ವಿಷಯ ಶಿಕ್ಷಕರ ರಾಜ್ಯಮಟ್ಟದ ಕಾರ್ಯಾಗಾರ







## ರಾಷ್ಟ್ರೀಯ ಕಾರ್ಯಕಾರಿಣಿ, ಮುಂಬಯಿ







**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com